ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 28 ಜುಲೈ 18, 1982 ಬೆಲೆ 60 ಪೈಸೆ

ರಾಷ್ಟ್ರಪತಿ ಚುನಾವಣೆ

ಭಾರತದ ಏಳನೆಯ ರಾಷ್ಟ್ರಪತಿಯಾಗಿ ಗ್ಯಾನಿ ಜೇಲ್‌ಸಿಂಗ್‌ರು ಇದೀಗ ಆರಿಸಲ್ಪಟ್ಟಿದ್ದಾರೆ. ಇದೊಂದು ಸುದ್ದಿಯೇ ನಲ್ಲ. ಚುನಾವಣೆ ನಡೆಯುವ ಮೊದಲೇ ಈ ಫಲಿತಾಂಶ ಗೊತ್ತಿತ್ತು. ಎಷ್ಟು ಮತಗಳಿಂದ ಶ್ರೀಮಾನ್ ಜೇಲ್‌ಸಿಂಗ್‌ರು ಗೆದ್ದರು ಎಂಬುದನ್ನಲ್ಲ ನಾವಿಲ್ಲಿ ಪರಿಗಣಿಸಬೇಕಾಗಿರುವುದು.

ಚುನಾವಣೆ ಯಾಕಾಗಿ ನಡೆಯಿತು ಎಂಬುದನ್ನು ನಾವು ಇಲ್ಲಿ ವಿಮರ್ಶಿಸಬೇಕು. ಚುನಾವಣೆ ನಡೆದ ರೀತಿಯನ್ನು ನಾವಿಲ್ಲಿ ಪರಿಗಣಿಸಬೇಕಾಗಿದೆ.

ರಾಷ್ಟ್ರಪತಿಯು, ಎಲ್ಲರೂ ಸರ್ವಾನುಮತದಿಂದ ಆರಿಸಿದ ವ್ಯಕ್ತಿಯಾಗಬೇಕೆಂಬ ಇರಾದೆಯಿಂದ ಸಿ.ಪಿ.ಐ (ಎಂ) ಮತ್ತಿತರ ವಿರೋಧ ಪಕ್ಷಗಳು (ಡಿ.ಎಂ.ಕೆ., ಎ.ಐ.ಡಿ.ಎಂ.ಕೆ., ನ್ಯಾಷನಲ್ ಕಾನ್‌ಫರೆನ್ಸ್ ಬಿಟ್ಟು) ಪ್ರಧಾನಿಗೆ ಈ ಬಗ್ಗೆ ಪತ್ರ ಬರೆದಿದ್ದವು. ಭೇಟಿಯನ್ನು ಅಪೇಕ್ಷಿಸಿದ್ದವು ಆದರೆ ಶ್ರೀಮತಿ ಇಂದಿರಾ ಗಾಂಧಿ ಮತ್ತವರ ಪಕ್ಷವು ವಿರೋಧ ಪಕ್ಷಗಳ ಈ ಅತ್ಯುತ್ತಮ ಸಲಹೆಯನ್ನು ತಿರಸ್ಕರಿಸಿದರು. ಮಾತ್ರವಲ್ಲ, ತಮ್ಮ 'ಆಯ್ಕೆ'ಯ ವ್ಯಕ್ತಿ ಯಾರು ಎಂಬುದನ್ನೂ ಕೂಡಾ ಕೊನೆಯ ಘಳಿಗೆಯ ತನಕ 'ಗುಟ್ಟೆ'ನಲ್ಲಿಟ್ಟರು.

ಕೊನೆಗಾದರೂ, ಅವರು ಆಯ್ಕೆ ಮಾಡಿದ ವ್ಯಕ್ತಿಯು ರಾಷ್ಟ್ರದ ಹಿಂದಿನ ರಾಷ್ಟ್ರಪತಿಗಳ ಅರ್ಹತೆಯ ಮಟ್ಟಕ್ಕೆ ಹೋಲುವವರೇ ಎಂದು ನೋಡಿದರೂ ಅಂತಹ ಅರ್ಹತೆಯುಳ್ಳ ವ್ಯಕ್ತಿ ಅಲ್ಲವೆಂದು ತಿಳಿದು ಬಂತು. ಕಾಂಗ್ರೆಸ್ ಅಭ್ಯರ್ಥಿಯಾಗಿ ಆಯ್ಕೆ ಆಗಿದ್ದರು ಪ್ರಧಾನಿಯ ಖಾಸಾ ಮನುಷ್ಯ ಜೇಲ್‌ಸಿಂಗ್.

ಪಂಜಾಬಿನ ಮುಖ್ಯ ಮಂತ್ರಿಯ ಸ್ಥಾನದಲ್ಲಾಗಲೀ, ಕೇಂದ್ರದ ಗೃಹ ಮಂತ್ರಿಯಾಗಿದ್ದಾಗಲೂ ಅಥವಾ ಪಂಜಾಬಿನ ಅಂತರ್‌ಕಲಹದಲ್ಲಿ ಜೇಲ್‌ಸಿಂಗ್‌ರ ಪಾತ್ರವನ್ನು ಗಮನಿಸಿದರೆ ಅವರ ಅರ್ಹತೆಯ ಮಟ್ಟ ಸ್ಪಷ್ಟವಾಗುವದು. ಅಥವಾ ವಿದ್ಯಾಭ್ಯಾಸದ ಅರ್ಹತೆಯ ದೃಷ್ಟಿಯಿಂದಾಗಲೀ ಜೇಲ್‌ಸಿಂಗ್‌ರಿಗೂ ಹಿಂದಿನ ರಾಷ್ಟ್ರಪತಿಗಳಿಗೂ ಬಹಳ ಅಂತರವಿದೆ.

ಜೇಲ್‌ಸಿಂಗ್‌ರ ಹೆಸರು ರಾಷ್ಟ್ರಪತಿ ಸ್ಥಾನಕ್ಕೆ ಸೂಚಿಸಲ್ಪಟ್ಟಾಗ ದೇಶದ ಜನತೆಗಿದ್ದ 'ಆತಂಕ', ಚುನಾವಣೆಯ ಪ್ರಚಾರದ ವೇಳೆ ಮತ್ತಷ್ಟು ಧೃಡವಾಯಿತು.

ಜೇಲ್‌ಸಿಂಗ್ ಚುನಾವಣಾ ಪ್ರಚಾರದುದ್ದಕ್ಕೂ ನೆಹರೂ ಕುಟುಂಬದ ಹೊಗಳಿಕೆ, ಇಂದಿರಾ ಗಾಂಧಿಯ ನೇತೃತ್ವದ ಅನಿವಾರ್ಯತೆಯ ಬಗ್ಗೆ ಉದ್ದುದ್ದ ವ್ಯಾಖ್ಯಾನಗಳನ್ನು ನೀಡಿದರು. ದೇಶದ ಸಮಸ್ಯೆಗಳನ್ನು ಗುರುತಿಸಿ ಅವುಗಳ ಪರಿಹಾರಕ್ಕಾಗಿ ದೇಶವು ಯಾವದಿಕ್ಕಿನಲ್ಲಿ ಮುಂದುವರಿಯುವ ಬಗ್ಗೆ ಎಲ್ಲೂ ಉಲ್ಲೇಖವಿರಲಿಲ್ಲ.

"ತಾನು ಶ್ರೀಮತಿ ಇಂದಿರಾ ಗಾಂಧಿಯ ನಿರ್ದೇಶನವನ್ನು ಚಾಚೂ ತಪ್ಪದೆ ನಿರ್ವಹಿಸುವೆನು ಮಾತ್ರವಲ್ಲ ಯಾವ ರೀತಿಯಲ್ಲಾದರೂ ಶ್ರೀಮತಿ ಇಂದಿರಾ ಗಾಂಧಿಯ ಆಡಳಿತೆಯ ಬಗ್ಗೆ ವಿಮರ್ಶೆ ಮಾಡಲಾರೆ" ಎಂಬುದೇ ಜೇಲ್‌ಸಿಂಗ್‌ರ ಪ್ರಚಾರದ ಮುಖ್ಯಾಂಶವಾಗಿತ್ತು.

ರಾಷ್ಟ್ರಪತಿಯವರು ಯಾರೇ ಆಗಲಿ, ಅವರು ದೇಶವನ್ನು ಆಳುವವರಿಗೆ ಸರಿಯಾದ 'ಸಲಹೆ' ಕೊಡುವಷ್ಟರ ಮಟ್ಟಿಗೆ ಯೋಗ್ಯತೆಯನ್ನು, ಘನಸ್ಥಿತಿಯನ್ನು ಪಡೆದಿರಬೇಕಾದದು ನ್ಯಾಯ. ಆದರೆ ಈ ಕಾರ್ಯವನ್ನು ಜೇಲ್‌ಸಿಂಗ್ ನಿರ್ವಹಿಸಲಾರರೆಂಬುದು ನಗ್ನ ಸತ್ಯ.

ಅವರು 'ಒತ್ತು ಮುದ್ರೆ' ಮಾತ್ರ.

ದೇಶದ ಭವಿಷ್ಯತ್ತಿನ ಬಗ್ಗೆ ತೀರಾ ಚಿಂತೆಗೊಳಗಾಗಬೇಕಾದ ಸಂದರ್ಭ ಇದೆಂದು ಮಾತ್ರ ಈಗ ಹೇಳಲು ಸಾಧ್ಯ.

ಕ್ಯಾಪಿಟೇಷನ್ ಶುಲ್ಕ

ಕರ್ನಾಟಕ, ಆಂಧ್ರ ಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಕೆಲವು ಖಾಸಗಿ ಕಾಲೇಜುಗಳು ಕ್ಯಾಪಿಟೇಷನ್ ಶುಲ್ಕವನ್ನು ವಸೂಲಿ ಮಾಡುತ್ತಿರುವುದು ಭ್ರಷ್ಟಾಚಾರದ ಕ್ರಮವಾಗಿದೆ ಎಂದು ರಾಜ್ಯ ಸಭೆಯಲ್ಲಿ ಶಿಕ್ಷಣ ರಾಜ್ಯ ಖಾತೆ ಸಚಿವೆ ಶ್ರೀಮತಿ ಶೈಲಾಕೌಲ್ ಅವರು ಒಪ್ಪಿಕೊಂಡಿರುವರು. ಶಿಕ್ಷಣವು ರಾಜ್ಯದ ಪರಿಮಿತಿಯೊಳಗೆ ಬರುವುದರಿಂದ ಈ ಬಗ್ಗೆ ಕೇಂದ್ರ ಸರಕಾರವು ಏನೂ ಮಾಡುವಂತಿಲ್ಲವೆಂದೂ, ಕೇಂದ್ರ ಸರಕಾರವು ಕ್ಯಾಪಿಟೇಷನ್ ಶುಲ್ಕವನ್ನು ತೀರಾ ವಿರೋಧಿಸುತ್ತದೆ ಎಂಬುದಾಗಿಯೂ ಮಂತ್ರಿಯವರು ಹೇಳಿದರು. ಕೇಂದ್ರ ಸರಕಾರಕ್ಕೆ ರಾಜ್ಯ ಸರಕಾರಗಳಿಂದ ದೊರೆತ ವಿವರದ ಪ್ರಕಾರ ವೃತ್ತಿಪರ ಕಾಲೇಜುಗಳಲ್ಲಿ ಆರು ಸಹಸ್ರ ರೂಪಾಯಿಗಳಿಂದ ಹನ್ನೆರಡು ಸಹಸ್ರ ರೂಪಾಯಿಗಳಷ್ಟು ಕ್ಯಾಪಿಟೇಷನ್ ಶುಲ್ಕವನ್ನು ವಸೂಲಿ ಮಾಡಲಾಗುತ್ತಿದೆ ಎಂದೂ ಹೇಳಿದ ಮಂತ್ರಿಯವರು ಇದನ್ನು ನಿಲ್ಲಿಸುವುದರಲ್ಲಿ ಕೇಂದ್ರದ ಅಸಮರ್ಥತೆಯನ್ನೂ ತೋಡಿಕೊಂಡರು.

ಕರ್ನಾಟಕ ರಾಜ್ಯದ ಗುಂಡೂರಾವ್ ಸರಕಾರವು ವೈದ್ಯಕೀಯ ಕಾಲೇಜುಗಳಲ್ಲಿ 1,60,000 ರುಪಾಯಿಗಳಷ್ಟು ಕ್ಯಾಪಿಟೇಷನ್ ಶುಲ್ಕವನ್ನು ವಸೂಲಿ ಮಾಡಲು ಅನುಮತಿ ನೀಡಿರುವುದರ ಬಗ್ಗೆ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿರುವ ಹಳೆಯ ಸುದ್ದಿಯನ್ನು ತೋರಿಸುತ್ತಾ ಸಿ.ಪಿ.ಐ. (ಎಂ)ನ ಸದಸ್ಯೆ ಕಾಂ| ಕನಕ್ ಮುಖರ್ಜಿಯವರು ಕರ್ನಾಟಕದಲ್ಲಿ ಕ್ಯಾಪಿಟೇಷನ್ ಶುಲ್ಕದ

ಸಂಪಾದಕೀಯ

ಹಾವಳಿಯನ್ನು ಎತ್ತಿ ತೋರಿಸಿದರು. 20,000 ಡಾಲರುಗಳಿಗೆ ಒಂದು ವೈದ್ಯಕೀಯ ಸೀಟು ಕೊಡುವೆವಾಗಿ ಬೆಳಗಾವಿಯ ಜವಹರಲಾಲ್ ವೈದ್ಯಕೀಯ ಕಾಲೇಜು ಪತ್ರಿಕೆಗಳಲ್ಲಿ ಪ್ರಕಟಿಸಿರುವ ಜಾಹೀರಾತುಗಳನ್ನು ಕನಕ ಮುಖರ್ಜಿಯವರು ತೋರಿಸಿದರೂ ಮಂತ್ರಿಯವರು ಈ ಸುದ್ದಿಗಳೆಲ್ಲ ಸರಿಯಿಲ್ಲ ಎಂದು ತಳ್ಳಿ ಹಾಕಲು ಪ್ರಯತ್ನಿಸಿದರು.

ಕ್ಯಾಪಿಟೇಷನ್ ಶುಲ್ಕವನ್ನು ವಸೂಲಿ ಮಾಡಿ ಡಿಗ್ರಿಗಳನ್ನು ಮಾರಾಟ ಮಾಡುವ ಈ ಕ್ರಮವು ನಡೆಯುತ್ತಿರುವುದು ಇಂದಿರಾ ಕಾಂಗ್ರೆಸ್ಸಿನ ಆಡಳಿತವಿರುವ ಮೂರು ರಾಜ್ಯಗಳಲ್ಲಿ ಎಂಬುದನ್ನು ಗಮನಿಸಬೇಕು. ಕರ್ನಾಟಕ ರಾಜ್ಯದಲ್ಲಂತೂ ಖಾಸಗಿ ಕಾಲೇಜುಗಳು ಹುಲುಸಾಗಿ ಬೆಳೆದಿವೆ. ವೈದ್ಯಕೀಯ, ತಾಂತ್ರಿಕ, ನ್ಯಾಯಶಾಸ್ತ್ರ, ಉಪಾಧ್ಯಾಯರುಗಳ ತರಬೇತಿ ಹೀಗೆ ಬೇರೆ ಬೇರೆ ವೃತ್ತಿಪರ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಶುಲ್ಕದ ಮೂಲಕ ಸುಲಿಗೆ ನಡೆಸಲಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿ ವಿಜ್ಞಾನ ಮತ್ತು ಕಲಾ ಕಾಲೇಜುಗಳಲ್ಲಿ ಹೆಚ್ಚಿನವು ಖಾಸಗಿಯಾಗಿದ್ದು ಅವುಗಳಲ್ಲೂ ಸುಲಿಗೆ ಅವ್ಯಾಹತವಾಗಿ ನಡೆಯುತ್ತಿದೆ. ಬೇರೆ ಎಲ್ಲಾ ರಾಜ್ಯಗಳಿಗಿಂತಲೂ ಹೆಚ್ಚಿಗೆ ಖಾಸಗಿ ವೃತ್ತಿಪರ ಕಾಲೇಜುಗಳು ಇಲ್ಲಿ ಹುಟ್ಟಿಕೊಂಡಿದ್ದು, ನೆರೆರಾಜ್ಯಗಳಿಂದಲೂ, ಬೇರೆ ದೇಶಗಳಿಂದಲೂ ಸಿರಿವಂತರ ಮಕ್ಕಳು ಬಂದು ಸೇರಿಕೊಳ್ಳುತ್ತಿದ್ದಾರೆ. ಇವೆಲ್ಲಾ ಬಹಿರಂಗವಾಗೇ ನಡೆಯುತ್ತಿದ್ದರೂ, ಕರ್ನಾಟಕ, ಆಂಧ್ರ ಮತ್ತು ಬಿಹಾರ ರಾಜ್ಯಗಳಲ್ಲಿ ಕಾಂಗ್ರೆಸರಕಾರಗಳೇ ಅಧಿಕಾರದಲ್ಲಿದ್ದರೂ ಕೇಂದ್ರದಲ್ಲಿರುವ ಇಂದಿರಾ ಸರಕಾರವು ಸತ್ಯವನ್ನು ಮರೆಮಾಡುತ್ತಿದೆ. ಮತ್ತು ತನ್ನ ಅಸಮರ್ಥತೆಯನ್ನು ಹೇಳುತ್ತಿದೆ !

(8ನೇ ಪುಟ ನೋಡಿ)

ಬೆಂಗಳೂರಿನಲ್ಲಿ ಜುಲೈ 23, 24, 25 ರಂದು

ಸಿ. ಐ. ಟಿ. ಯು. ಅಖಿಲ ಭಾರತ ಕಾರ್ಯಕಾರಿ ಸಮಿತಿಯ ಸಭೆ

ಕಾಂಗ್ರೆಸ್(ಐ) ಸರಕಾರಗಳ ದೊಡ್ಡ ಬಂಡವಾಳಗಾರರ-ಜಮೀನ್ದಾರರ ಪರವಾದ ಹಾಗೂ ಜನವಿರೋಧಿ ದಿವಾಳಿಕೋರ ಆರ್ಥಿಕ ನೀತಿಯಿಂದಾಗಿ ಜೀವನಾವಶ್ಯಕ ದಿನಬಳಕೆಯ ವಸ್ತುಗಳ ಬೆಲೆಗಳು ದಿನೇ ದಿನೇ ಏರುತ್ತಿವೆ. ಇದರಿಂದಾಗಿ ಕಾರ್ಮಿಕ ನೌಕರರ ಕೊಳ್ಳುವ ಶಕ್ತಿಯು ಕಡಿಮೆಯಾಗುತ್ತಿದ್ದು ಜೀವನಮಟ್ಟ ಕೆಳಗೆ ಇಳಿಯುತ್ತಿದೆ. ನಿರುದ್ಯೋಗವು ಪೆಡಂಭೂತವಾಗಿ ಕಾಡುತ್ತಿದೆ. ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಸಿಕ್ಕದೆ ರೈತರ ಸುಲಿಗೆಯಾಗುತ್ತಿದೆ. ಕೃಷಿ ಕೂಲಿಗಾರರ ಶೋಷಣೆ ವಿಪರೀತವಾಗಿದ್ದು ಹೊಟ್ಟೆ ತುಂಬುವುದೇ ಕಷ್ಟವಾಗಿದೆ.

ಕಾರ್ಮಿಕರು ತಮ್ಮ ಬೇಡಿಕೆಗಾಗಿ, ಇತರ ಜನ ವಿಭಾಗದ ಬೇಡಿಕೆಗಳಿಗಾಗಿ, ಪ್ರಜಾಪ್ರಭುತ್ವ ಹಕ್ಕುಗಳ, ನಾಗರೀಕ ಸ್ವಾತಂತ್ರ್ಯದ ರಕ್ಷಣೆಗಾಗಿ ಹೋರಾಡುವಾಗ ಪಾಶವೀ ಬಲಪ್ರಯೋಗದಿಂದ ಹೋರಾಟಗಳನ್ನು ಹತ್ತಿಕ್ಕಲಾಗುತ್ತಿದೆ. ಅಗತ್ಯ ಸೇವಾ ನಿರ್ವಹಣಾ ಶಾಸನ, ರಾಷ್ಟ್ರೀಯ ಭದ್ರತಾ ಶಾಸನಗಳನ್ನು ಪ್ರಯೋಗಿಸಲಾಗುತ್ತಿದೆ.

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಸಾಲ ಪಡೆಯುವಾಗ ಹಾಕಿದ ಅವಮಾನಕರ ಕರಾರುಗಳಿಗೆ ಒಪ್ಪಿದರ ಪರಿಣಾಮವಾಗಿ ಕಾಂಗ್ರೆಸ್ (ಐ) ಸರ್ಕಾರವು ವೇತನ ಸ್ತಂಭನ ದೊರಣೆಯನ್ನು ಅನುಸರಿಸುತ್ತಿದೆ. ಉತ್ಪಾದಕತೆಯಲ್ಲಿ ಹೆಚ್ಚಳವಿಲ್ಲದೆ ಸಂಬಳ-ವೇತನಗಳ ಹೆಚ್ಚಳ ಸಾಧ್ಯವಿಲ್ಲವೆಂದು ಹೇಳಿಕಲ್ಲಿದ್ದಲು, ಉಕ್ಕು, ಬಿ. ಎಚ್. ಇ. ಎಲ್. ಮೊದಲಾದ ಕೈಗಾರಿಕೆಗಳಲ್ಲಿ ಕಾರ್ಮಿಕರ ಮೇಲೆ ಸಮರವನ್ನು ಸಾರಿದೆ. ಮುಂಬಯಿಯ 2,50,000 ಹತ್ತಿ ಜವಳಿ ಕಾರ್ಮಿಕರು ಕಳೆದ ಆರು ತಿಂಗಳಿಂದ ಶ್ಲಾಘನೀಯ ಮುಷ್ಕರ ನಡೆಸುತ್ತಿದ್ದು ಮುಷ್ಕರದ ಇತ್ಯರ್ಥಕ್ಕೆ ಸರ್ಕಾರವೇ ಅಡ್ಡಿಯಾಗಿದೆ. ಬಳಕೆದಾರರ ಬೆಲೆ ಸೂಚ್ಯಂಕದಲ್ಲಿರುವ ದೋಷಗಳನ್ನು ಸರಿಪಡಿಸಲು ನಿರಾಕರಿಸಿ ಕಾರ್ಮಿಕರ ಶೋಷಣೆಯನ್ನು ಹೆಚ್ಚಿಸಿದೆ. ಗುಪ್ತಮತದಾನದ ಮೂಲಕ ಕಾರ್ಮಿಕ ಸಂಘಗಳ ಮನ್ನಣೆ ಮತ್ತು ಪ್ರಾತಿನಿಧ್ಯಗಳನ್ನು ನಿರ್ಣಯಿಸಬೇಕೆಂಬ (ಐ.ಎನ್.ಟಿ.ಯು.ಸಿ. ಯನ್ನು ಬಿಟ್ಟು ಉಳಿದ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ) ಬೇಡಿಕೆಯನ್ನು ತಿರಸ್ಕರಿಸಿ ಜೀಹುಕ್ಕುಂ-ಚಮಚಾ ಸಂಘಗಳಿಗೆ ಮನ್ನಣೆ ಕೊಡುವ ವಿಧಾನವನ್ನು ಕಾಂಗ್ರೆಸ್ (ಐ) ಸರ್ಕಾರವು ಅನುಸರಿಸುತ್ತಿದೆ.

ಅನೇಕ ವರ್ಷಗಳ ಹೋರಾಟ, ಬಲಿದಾನಗಳಿಂದ ಗಳಿಸಿರುವ ಟ್ರೇಡ್

(8ನೇ ಪುಟ ನೋಡಿ)

ರೈತ ಸಂಘದ ಚಟುವಟಿಕೆಗಳು

ಸಾಣಿಕೊಪ್ಪ :

ಬೈಲಹೊಂಗಲ ತಾಲ್ಲೂಕಿನ ಸಾಣಿಕೊಪ್ಪದ ಪಂಚಾಯಿತಿ ಗ್ರಾಮಸ್ಥರ ಮೇಲೆ ನಾನಾ ರೀತಿಯ ಕರಗಳನ್ನು ಹೇರಿದ್ದೇ ಯಾವುದೇ ಸೌಲಭ್ಯಗಳನ್ನು ಒದಗಿಸದಿರುವುದಕ್ಕೆ ರೈತ ಸಂಘದ ಸಾಣಿಕೊಪ್ಪ ಘಟಕವು ಪ್ರತಿಭಟಿಸಿದೆ.

ಪ್ರತಿ ವರ್ಷವೂ 'ಬಾಕಿ' ಎಂದು ಹೆಚ್ಚು ಕರವನ್ನು ವಸೂಲು ಮಾಡುತ್ತಿದ್ದು, ಇದರಲ್ಲಿ ಸಾಕಷ್ಟು ಅವ್ಯವಹಾರ ನಡೆದಿರುವುದಾಗಿ ತಿಳಿದು ಬಂದಿದೆ. ಮನೆಯ ಕರವನ್ನು ತುಂಬಿಸಿಕೊಂಡೂ ಮತ್ತೆ ಬಾಕಿ ಎಂದು ಹೆಚ್ಚು ಹಣ ವಸೂಲು ಮಾಡುವದು ನಡೆದಿದೆ (ಇದಕ್ಕೆ ಅನೇಕ ಸಾಕ್ಷ್ಯಾಧಾರಗಳನ್ನೂ ರೈತ ಸಂಘ ಒದಗಿಸಿದೆ). ಪ್ರತಿವರ್ಷ ಲೈಬ್ರರಿಕರ, ಆರೋಗ್ಯಕರ, ಶಿಕ್ಷಣಕರ ಇತ್ಯಾದಿ ಹೆಸರಿನಲ್ಲಿ ಹಣ ವಸೂಲು ಮಾಡುತ್ತಿದ್ದರೂ ಊರಿಗೆ ಒಂದೇ ಒಂದು ಪತ್ರಿಕೆ ಸಹ ಬರುತ್ತಿಲ್ಲ. ಆರೋಗ್ಯದ ವಿಷಯದಲ್ಲೂ ಕಿಂಚಿತ್ತೂ ಕಾಳಜಿ ವಹಿಸಿಲ್ಲ.

ಈ ಎಲ್ಲ ಅನ್ಯಾಯ, ತಪ್ಪುಗಳ ಯೋಗ್ಯ ತನಿಖೆಯಾಗಬೇಕು; ಈ ಎಲ್ಲ ಅನ್ಯಾಯಗಳನ್ನು ಸರಿಪಡಿಸಿ ಪಂಚಾಯಿತಿಗೆ ಸಾಣಿಕೊಪ್ಪ ಹಳ್ಳಿಯ ಘಟಕವಾಗಿ ಸೇರಿದಾಗಿನಿಂದ ವಸೂಲು ಮಾಡಲಾದ ಹಣದಿಂದ ಹಳ್ಳಿಯ ಅಭಿವೃದ್ಧಿ ಕಾರ್ಯಗಳನ್ನು ಕೈಕೊಂಡರೆ ಮಾತ್ರ ಪಂಚಾಯಿತಿಗೆ ಯೋಗ್ಯವೆಂದು ಕಾಣುವ ಕರಗಳನ್ನು ತುಂಬಲಾಗುವದೆಂದೂ ರೈತ ಸಂಘದ ಘಟಕವು ಎಚ್ಚರಿಸಿದೆ. ಈ ಕುರಿತು ಸಂಬಂಧಿಸಿದವರಿಗೆಲ್ಲ ಈಗಾಗಲೇ ಮನವಿ ಸಲ್ಲಿಸಲಾಗಿದೆ.

ವಡೇರ ಹೋಬಳಿ :

ದ. ಕ. ಜಿಲ್ಲಾ ಕುಂದಾಪುರ ತಾಲ್ಲೂಕಿನ ವಡೇರ ಹೋಹಳಿ ಗ್ರಾಮ ರೈತ ಸಂಘದ ಸಭೆಯು 8-7-82 ರಂದು ನಡೆಯಿತು. ಕಾಂ| ವಿ.ಬಚ್ಚು ಅವರು ಅಧ್ಯಕ್ಷತೆ ವಹಿಸಿದ್ದರು. ಸಭೆಗೆ ಮುಖ್ಯ ಅತಿಥಿಗಳಾಗಿ ಕಾಂ| ಅಬ್ರಹಾಂ ಕರ್ಕಡ್ ಮತ್ತು ಕಾಂ| ವೆಂಕಟೇಶ್ ಕೋಣಿ ಇವರುಗಳು ಆಗಮಿಸಿದ್ದರು.

ಆಗಸ್ಟ್ 82ರ ರೈತರ ಬೃಹತ್ 'ಬೆಂಗಳೂರು ಜಾಥಾ' ಮತ್ತು ಸಹಿ ಸಂಗ್ರಹದ ಮಹಾ ಮನವಿಗೆ ವಡೇರ್ ಹೋಬಳಿ ಗ್ರಾಮದ ವತಿಯಿಂದ 3000ಕ್ಕೂ ಹೆಚ್ಚು ಸಹಿ ಸಂಗ್ರಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಕಾಂ| ವಿ.ಪುಟ್ಟಣ್ಣ ಮತ್ತು ವಿಜಯ ಕುಮಾರ್ ಅವರುಗಳು ಸಹಿ ಸಂಗ್ರಹ ಕೆಲಸದ ನೇತೃತ್ವ ವಹಿಸಿದ್ದಾರೆ. ರಾಜ್ಯ ಮಟ್ಟದ 'ಬೆಂಗಳೂರು ಜಾಥಾ' ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಅತಿಥಿಗಳಾಗಿ ಭಾಗವಹಿಸಿದ್ದ ಕಾಂ| ಅಬ್ರಹಾಂ ಮತ್ತು ಕಾಂ| ವೆಂಕಟೇಶ್ ಕೋಣಿ ರೈತರಿಗೆ ಕರೆ ಇತ್ತರು.

ಕೋಟೆಕಾರು :

1-7-82ರಂದು ಕೋಟೆಕಾರುಗ್ರಾಮ ರೈತ ಸಂಘದ ಸಭೆಯು ಶ್ರೀ ಉಗ್ಗಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು.

ಕಾರ್ಯದರ್ಶಿ ಕಾಂ| ನಾಗಪ್ಪ ಸಾಲಿಯಾನ್‌ರವರು ಸಭೆಯ ಉದ್ದೇಶವನ್ನು ವಿವರಿಸಿದ ಬಳಿಕ ಚರ್ಚೆ ನಡೆದು, ಪ್ರಾಂತ ರೈತ ಸಂಘದ ಮನವಿಗೆ ಸಹಿ ಸಂಗ್ರಹಿಸುವ ಕೆಲಸವನ್ನು ಕೂಡಲೇ ನಡೆಸಲು ತೀರ್ಮಾನಿಸಲಾಯಿತು.

ಕೋಟೆಕಾರು ಕಾಚಾರು ಎಂಬಲ್ಲಿರುವ ಕಾಲು ಸೇತುವೆ ಹಾಗಿದ್ದು ವಾಹನ ಸಂಚಾರವು ಕೆಟ್ಟಿರುವುದನ್ನು, ಈ ರಸ್ತೆಯಿಂದ ಹೋಗಿ ಬರುವ ಪ್ರಯಾಣಿಕರಿಗೆ ಬಸ್ಸಿನ ಸೌಕರ್ಯಕ್ಕೆ ತೊಂದರೆಯಾಗಿರುವುದನ್ನು ಸಭೆಯು ಗಮನಿಸಿ, ಈ ಕೂಡಲೇ ರಸ್ತೆಯನ್ನು ದುರಸ್ತಿಗೊಳಿಸಬೇಕೆಂದು ಸರಕಾರವನ್ನು ಒತ್ತಾಯಿಸಲಾಯಿತು.

ಕೋಟೆಕಾರು ನಡುಕುಮೇರಿನಲ್ಲಿರುವ ನ್ಯಾಯ ಬೆಲೆಯ ಅಂಗಡಿಯನ್ನು ಮುಚ್ಚಿರುವುದರಿಂದ ಕಾರ್ಡುದಾರರಿಗೆ ತುಂಬಾ ಕಷ್ಟವಾಗಿರುತ್ತದೆ. ಆದುದರಿಂದ ಕೂಡಲೇ ಈ ಅಂಗಡಿಯನ್ನು ತೆರೆಯಲು ತಹಶಿಲ್ದಾರರು ಕ್ರಮಕೈಕೊಳ್ಳಬೇಕೆಂದು ಸಭೆಯು ಸರಕಾರವನ್ನು ವಿನಂತಿಸಿಕೊಂಡಿದೆ.

ಮುನ್ನೂರು :

ಮಂಗಳೂರು ತಾಲ್ಲೂಕಿನ ಮುನ್ನೂರು ಗ್ರಾಮದ ರೈತರ ಸಭೆ ಕೆ. ರಾಮನಾಯ್ಕರ ಅಧ್ಯಕ್ಷತೆಯಲ್ಲಿ ಜರುಗಿತು. ಆರಂಭದಲ್ಲಿ ಆನಂದ ಬೆಳ್ಮಾಡರು ಸಭೆಯ ಉದ್ದೇಶವನ್ನು ವಿವರಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಮೂಲಕ ಸರಕಾರಕ್ಕೆ ರಾಜ್ಯದ ರೈತರು ಸಲ್ಲಿಸಲಿರುವ ಮಹಾ ಮನವಿಗೆ ಸುಮಾರು 1750 ರೈತರ ಸಹಿ ಸಂಗ್ರಹ ಮಾಡಬೇಕೆಂದು ತೀರ್ಮಾನಿಸಲಾಯಿತು.

ನಂತರ ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಕಾಂ| ರಾಮಚಂದ್ರ ಉಚ್ಚಿಲ್ ಅವರುಗಳು ಮಾತನಾಡಿ ಸಹಿ ಸಂಗ್ರಹ ಕಾರ್ಯದ ಮಹತ್ವವನ್ನು ವಿವರಿಸಿದರು.

ಕೋಣಾಜೆ :

ಪ್ರಾಂತ ರೈತ ಸಂಘ ಸರಕಾರಕ್ಕೆ ಸಲ್ಲಿಸಲಿರುವ ಮನವಿಗೆ ಸಹಿ ಸಂಗ್ರಹ ಕಾರ್ಯವನ್ನು ಚುರುಕುಗೊಳಿಸುವ ಉದ್ದೇಶದಿಂದ ಮಂಗಳೂರು ತಾಲ್ಲೂಕಿನ ಕೋಣಾಜೆ ಗ್ರಾಮದಲ್ಲಿ 8-7-82 ರಂದು ರೈತ ಸಂಘದ ಸಭೆ ನಡೆಯಿತು. ಮಹಾ ಮನವಿಗೆ 2000 ಸಹಿ ಸಂಗ್ರಹ ಮಾಡಬೇಕೆಂದು ತೀರ್ಮಾನಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ನಾರಾಯಣ ಪೂಜಾರಿ ವಹಿಸಿದ್ದರು.

ಇತ್ತೀಚೆಗೆ ಅಬಕಾರಿ ಪೋಲೀಸ್ ಅಧಿಕಾರಿಗಳು ಬಡ ರೈತರ ಮನೆಗೆ ದಾಳಿ ಮಾಡಿದ್ದನ್ನು ಸಭೆಯಲ್ಲಿ ಖಂಡಿಸಲಾಯಿತು. ಕೊನೆಯಲ್ಲಿ ಕಾಂ| ರಾಮಚಂದ್ರ ಉಚ್ಚಿಲ್ ಮಾತನಾಡಿ ಸಂಘಟನೆಯನ್ನು ಬಲಪಡಿಸಲು ಕೋರಿದರು.

ಸಿಂಧನೂರು:

ದ.ಸಂ.ಸ. ಕಾರ್ಯಕರ್ತನ ಮೇಲೆ ಗೂಂಡಾಗಳಿಂದ ಹಲ್ಲೆ

ಸಿಂಧನೂರಿನ ಆದಿಶೇಷ ದೇವಸ್ಥಾನದ ಬಳಿ ಶ್ರೀ ಚಂದಪ್ಪ ಎಂಬುವವರು ಅಂಗಡಿಯೊಂದನ್ನಿಟ್ಟಿದ್ದರು. ಸುಮಾರು 33 ವರ್ಷಗಳಿಂದ ಅಂಗಡಿಯನ್ನಿಟ್ಟಿರುವ ಚಂದಪ್ಪನವರು ತಿಂಗಳಿಗೆ 30 ರೂ.ಗಳನ್ನು ದೇವಸ್ಥಾನ ಸಮಿತಿಗೆ ಸಲ್ಲಿಸುತ್ತಿದ್ದರು.

ಚಂದಪ್ಪನವರನ್ನು ಈ ಜಾಗದಿಂದ ಓಡಿಸಿ ಕೈವಶಮಾಡಿಕೊಂಡರೆ ಸ್ಥಳಕ್ಕೆ ಒಳ್ಳೆಯ ಬೆಲೆ ಬರಬಹುದೆಂಬ ದುರಾಶೆಯಿಂದ ಸ್ಥಳೀಯ ಗೂಂಡಾ ಬಾಷಾಮಿಯ ಎಂಬುವವನು ಉಪಾಯದಿಂದ ಚಂದಪ್ಪನವರನ್ನು ಸ್ಥಳ ಖಾಲಿ ಮಾಡಿಸಿದ. ಅಸಹಾಯಕ ಚಂದಪ್ಪನವರ ನೆರವಿಗೆ ದ. ಸಂ. ಸ ಯ ಕಾರ್ಯಕರ್ತರು ಬಂದು ಈ ಕುರಿತು ಪುರಸಭೆ ಅಧಿಕಾರಿಗಳು, ತಹಶೀಲ್ದಾರರೊಂದಿಗೆ ಚರ್ಚಿಸಿದರು. ಇದರಿಂದಾಗಿ ಅಂಗಡಿಯನ್ನು ಪುನಃ ಹಾಕಿಕೊಳ್ಳಲು ತಹಶೀಲ್ದಾರರು ಸೂಚಿಸಿದರು

25-6-82 ರಂದು ಹಾಕಿಕೊಳ್ಳಲು ಶ್ರೀ ಚಂದಪ್ಪ ಪ್ರಯತ್ನ ನಡೆಸಿದರು. ಅವರೊಂದಿಗೆ ದ. ಸಂ. ಸ. ಕಾರ್ಯಕರ್ತ ಕಾಂ| ವಿಕ್ರಮ್ ಅವರೂ ಸ್ಥಳದಲ್ಲಿದ್ದರು. ಗೂಂಡಾ ಬಾಷಾಮಿಯ ತನ್ನವರೊಂದಿಗೆ ಬಂದು ಕಾಂ| ವಿಕ್ರಮ್ ಅವರ ಮೇಲೆ ಹಲ್ಲೆ ನಡೆಸಿದರು.

ಗೂಂಡಾಗಳ ಈ ಕೃತ್ಯವನ್ನು ದಲಿತ ಸಂಘರ್ಷದ ಸಿಂಧನೂರು ತಾಲ್ಲೂಕು ಘಟಕವು ತೀವ್ರವಾಗಿ ಖಂಡಿಸಿದೆ.

ಕಾಂ| ವಿಕ್ರಮ್ ಅವರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ 3-7-82 ರಂದು ಸಿಂಧನೂರಿನ ಎಸ್.ಎಫ್.ಐ. ಘಟಕವು ಮೆರವಣಿಗೆ ಹೊರಡಿಸಿತ್ತು. ಹಲ್ಲೆ ನಡೆಸಿದ ಅಪರಾಧಿಗಳನ್ನು ಶಿಕ್ಷಿಸಬೇಕೆಂದು ಒತ್ತಾಯಿಸಿ ತಹಶೀಲ್ದಾರರ ಬಳಿ ತೆರಳಿದ್ದ ಎಸ್. ಎಫ್. ಐ. ನಿಯೋಗ ಒತ್ತಾಯಿಸಿದೆ.

ನಂತರ ಪ್ರದರ್ಶನಕಾರರನ್ನು, ಸಾರ್ವಜನಿಕರನ್ನು ಉದ್ದೇಶಿಸಿ ಎಸ್. ಎಫ್. ಐ. ರಾಯಚೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ| ಕೆ. ಬಸವರಾಜ ಮತ್ತು ಕಾಂ| ವೀರಭದ್ರಗೌಡ ಮಾತನಾಡಿ ಕಾಂ| ವಿಕ್ರಮ್ ಅವರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿದರು.

ಕೆ.ಜಿ.ಎಫ್. :

ಗೋಳಿಬಾರ್‌ನಲ್ಲಿ ಮಡಿದವರಿಗೆ ಮತ್ತು ನೊಂದವರಿಗೆ ಬಿ.ಜಿ.ಎಂ.ಎಲ್. ಕಾರ್ಮಿಕರಿಂದ ಪರಿಹಾರ ಕೊಡುಗೆ

ಜುಲೈ 5, 6 ಮತ್ತು 7 ರಂದು ಕೆ.ಜಿ ಎಫ್ ನಲ್ಲಿ ನಡೆದ ಗೋಳಿಬಾರ್‌ನಲ್ಲಿ ಮಡಿದವರ ಕುಟುಂಬಕ್ಕೆ ಮತ್ತು ಗಲಭೆಯಲ್ಲಿ ನೊಂದವರಿಗೆ ಬಿ. ಜಿ. ಎಂ. ಎಲ್. ಕಾರ್ಮಿಕರು ಪರಿಹಾರ ಧನ ಕೊಡುವ ಮೂಲಕ ಸ್ತುತ್ಯಾರ್ಹ ಕೆಲಸ ಮಾಡಿದ್ದಾರೆ. ದಿನಾಂಕ 12-7-82 ರಂದು ಕೆ.ಜಿ.ಎಫ್.ನಲ್ಲಿ ಸಭೆ ಸೇರಿದ್ದ ಬಿ. ಜಿ. ಎಂ. ಎಲ್. ಎಂಪ್ಲಾಯೀಸ್ ಯೂನಿಯನ್‌ನ ಕಾರ್ಯಕಾರಿ ಸಮಿತಿಯು ಈ ತೀರ್ಮಾನ ಕೈಗೊಂಡಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಕಾಂ| ಸೂರ್ಯನಾರಾಯಣರಾವ್ ವಹಿಸಿದ್ದರು. ಸಭೆ ಈ ಕೆಳಕಂಡ ತೀರ್ಮಾನ ಕೈಗೊಂಡಿದೆ.

(1) ಕೆ. ಜಿ. ಎಫ್. ನಲ್ಲಿ ನಡೆದ ಗೋಳಿಬಾರ್ ಮತ್ತು ಪೋಲೀಸ್ ದೌರ್ಜನ್ಯದ ಬಗ್ಗೆ ಸರಕಾರ ನ್ಯಾಯಾಂಗ ತನಿಖೆ ನಡೆಸಬೇಕು.

(2) ಜನರ ಮೇಲೆ ಹಾಕಿರುವ ಕೇಸ್‌ಗಳನ್ನು ಹಿಂತೆಗೆಯಬೇಕು.

(3) ಗಲಭೆಯಲ್ಲಿ ನೊಂದವರಿಗೆ ಸರಕಾರ ಘೋಷಿಸಿರುವ ಪರಿಹಾರ ಸಾಲದು; ಮಡಿದವರ ಕುಟುಂಬಗಳಿಗೆ ಕನಿಷ್ಟ ತಲಾ 10 ಸಾವಿರ ರೂ.ಗಳನ್ನು ಕೊಡಬೇಕು.

(4) ಸಂಘ ಈ ಕೂಡಲೇ ಮೊದಲ ಹಂತವಾಗಿ ಮಡಿದವರ ಕುಟುಂಬಗಳಿಗೆ ತಲಾ 300 ರೂ; ಗುಂಡೇಟಿಗೆ ತುತ್ತಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರಿಗೆ ತಲಾ 100 ರೂ. ಕೊಡಬೇಕು.

(5) ಮುಂದಿನ ತಿಂಗಳ ಸಂಬಳದಲ್ಲಿ ಪ್ರತಿ ಕಾರ್ಮಿಕರಿಂದ ತಲಾ 2 ರೂ. ವಸೂಲಿಮಾಡಿ ಮಡಿದವರ ಮತ್ತು ನೊಂದವರ ಕುಟುಂಬಗಳಿಗೆ ಪರಿಹಾರ; ಮೊಕದ್ದಮೆಗಳಲ್ಲಿ ಸಿಕ್ಕಿರುವವರಿಗೆ ಕೇಸ್‌ಗಳನ್ನು ನಡೆಸಲು ವೆಚ್ಚಕ್ಕೆ ಸಹಾಯ ಮಾಡಬೇಕು.

(6) ಬೇರೆ ಬೇರೆ ಸಂಘ ಸಂಸ್ಥೆಗಳ ನೆರವಿನಿಂದ ರಕ್ಷಣಾ ಸಮಿತಿ ಮಾಡಲು ಶ್ರಮಿಸಬೇಕು... ಇತ್ಯಾದಿ.

ಬೀಡಿ ಕಾರ್ಮಿಕರ ಸಭೆ

ಮಂಗಳೂರು:

12-7-82 ರಂದು ಮಂಗಳೂರಿನ ಬೀಡಿ ಕೆಲಸಗಾರರ ಸಂಘದ ವಾರ್ಷಿಕ ಮಹಾ ಸಭೆಯು ನಡೆಯಿತು. ಕಾಂ| ಲೋಕಯ್ಯಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಇತ್ತೀಚೆಗೆ ನಿಧನರಾದ ಸಂಘದ ಸದಸ್ಯರು ಹಾಗೂ ಕಾರ್ಮಿಕ ಮುಂದಾಳುಗಳಿಗೆ ಸಂತಾಪ ಸೂಚಿಸಲಾಯಿತು.

ಕಾರ್ಯದರ್ಶಿ ಕಾಂ| ಜೆ. ವೀರಪ್ಪನವರು ಗತ ವರ್ಷದ ವಾರ್ಷಿಕ ವರದಿಯನ್ನು ಮಂಡಿಸಿದರು. ಕೋಶಾಧಿಕಾರಿ ಕಾಂ| ಕಮಲಾಕ್ಷ ಬಂಗೇರ ಅವರು ಲೆಕ್ಕ ಪತ್ರದ ವರದಿ ಮಂಡಿಸಿದರು. ಎರಡನ್ನೂ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಪ್ರಸಕ್ತ ಸಾಲಿಗೆ ಅಧ್ಯಕ್ಷರಾಗಿ ಕಾಂ| ಜೆ. ವೀರಪ್ಪ, ಉಪಾಧ್ಯಕ್ಷರಾಗಿ ಬಿ. ಲೋಕಯ್ಯಶೆಟ್ಟಿ, ಕಮಲಾಕ್ಷ ಬಂಗೇರ ಮತ್ತು ಬಿ. ನಾರಾಯಣರಾವ್, ಪ್ರಧಾನ ಕಾರ್ಯದರ್ಶಿಯಾಗಿ ಕಾಂ| ಎಚ್. ಗೋಪಾಲ, ಜೊತೆ ಕಾರ್ಯದರ್ಶಿಗಳಾಗಿ ಕಾಂ| ಕೊರಗಪ್ಪ ರೈ, ಕೃಷ್ಣಶೆಟ್ಟಿ ಮತ್ತು ಕಾಂ| ಲೋಕೇಶ್, ಕೋಶಾಧಿಕಾರಿಯಾಗಿ ಜೆ. ಬಾಲಕೃಷ್ಣಶೆಟ್ಟಿ ಇವರುಗಳನ್ನು ಪದಾಧಿಕಾರಿಗಳಾಗಿಯೂ ಮತ್ತು 40 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನೂ ಸರ್ವಾನುಮತದಿಂದ ಚುನಾಯಿಸಲಾಯಿತು.

ಸಭೆಯನ್ನುದ್ದೇಶಿಸಿ ದ. ಕ. ಜಿಲ್ಲಾ ಬೀಡಿ ಫೆಡರೇಷನ್ನಿನ ಕಾರ್ಯದರ್ಶಿ ಕಾಂ| ಯು. ಬಿ. ಲೋಕಯ್ಯನವರು ಮಾತನಾಡಿ, ಬೀಡಿ ಕಾರ್ಮಿಕರ ಇತ್ತೀಚಿನ ಹೋರಾಟವನ್ನು ವಿವರಿಸಿದರು. ಅವರು ಮುಂದುವರಿದು ಸಂಘಟನೆಯನ್ನು ಬಲಪಡಿಸಲು ಕೋರಿದರು.

ಅಳಪೆ ಪ್ರದೇಶ :

4-7-82ರಂದು ಕಂಕನಾಡಿ ನಾಗೂರಿಯಲ್ಲಿ ಅಳಪೆ ಪ್ರದೇಶ ಬೀಡಿ ಲೇಬರ್ ಯೂನಿಯನ್‌ನ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಕಾಂ| ಕೆ. ಪಿ. ಸಾಲಿಯಾನ್ ವಹಿಸಿದ್ದರು. ಆರಂಭದಲ್ಲಿ ಸಂಘದ ಉಪಾಧ್ಯಕ್ಷರಾದ ಕಾಂ| ಜೆ. ಸದಾಶಿವ್ ಕಾರ್ಪೆಂಟರ್ ಅವರು ವಿವಿಧ ಪ್ರದೇಶಗಳಿಂದ ಬಂದ ಬೀಡಿ ಕಾರ್ಮಿಕರನ್ನು ಸ್ವಾಗತಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ಜೆ. ಬಾಲಕೃಷ್ಣಶೆಟ್ಟಿಯವರು ಜೂನ್ 15 ರಿಂದ ಜೂನ್ 21ರ ವರೆವಿಗೆ ನಡೆದ ಬೀಡಿ ಕಾರ್ಮಿಕರ ಧೀರ ಹೋರಾಟದ ಚಟುವಟಿಕೆಗಳ ವರದಿಯನ್ನು ಸಭೆಗೆ ಕೊಟ್ಟರು. ಕಾಂ| ಎಚ್. ಗೋಪಾಲ ಅವರು 21-6-82 ರಂದು ನಡೆದ ಒಪ್ಪಂದದ ಕುರಿತು ವಿವರಣೆ ನೀಡಿದರು.

ದ. ಕ. ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಷನ್ನಿನ ಕಾರ್ಯದರ್ಶಿ ಕಾಂ| ಯು. ಬಿ ಲೋಕಯ್ಯನವರು ಸಭೆಯನ್ನುದ್ದೇಶಿಸಿ ಮಾತನಾಡಿ ಇತ್ತೀಚೆಗೆ ನಡೆದ ಬೀಡಿ ಕಾರ್ಮಿಕರ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಕ್ಕಾಗಿ ಕಾರ್ಮಿಕರನ್ನು ಅಭಿನಂದಿಸಿದರು. ಕಾರ್ಮಿಕರ ಹಕ್ಕುಗಳನ್ನು ದಮನಮಾಡುತ್ತಿರುವ ಸರಕಾರದ ನೀತಿಯನ್ನು ಕಟುವಾಗಿ ಟೀಕಿಸಿದರು.

ಅಂತರರಾಷ್ಟ್ರೀಯ

ಮಾರಿಷಸ್‌ನಲ್ಲಿ ಎಡ ತಿರುವು

ಹಿಂದೂ ಮಹಾಸಾಗರದ ಒಂದು ಪುಟ್ಟ ದ್ವೀಪ ರಾಷ್ಟ್ರವಾದ ಮಾರಿಷಸ್ ಈಗ ಭಾರೀ ಸುದ್ದಿಯಲ್ಲಿದೆ. ಫಾಕ್‌ಲೆಂಡ್ ಮತ್ತು ಲೆಬನಾನ್ ಯುದ್ಧದ ಮೇಲೆ ಕೇಂದ್ರೀಕರಣವಾಗಿದ್ದ ಜಗತ್ತಿನ ಜನರ ಗಮನ ಈಗ ಇತ್ತ ಹೊರಳಿದೆ. ಕಾರಣ, ಜೂನ್ 11 ರಂದು ಈ ದ್ವೀಪದಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯ ಫಲಿತಾಂಶ. ವಾಮಪಂಥೀಯ ಪಕ್ಷಗಳ ಪ್ರಚಂಡ ಗೆಲುವು. ಪಾಶ್ಚಿಮಾತ್ಯ ರಾಷ್ಟ್ರಗಳ ಪರವಾಗಿದ್ದ ಸರ್ ಶಿವುಸಾಗರ್ ರಾಮ್‌ಗುಲಾಮ್ ನೇತೃತ್ವದ ಬಲಪಂಥೀಯ ಆಡಳಿತ ಪಕ್ಷವನ್ನು ಸಂಪೂರ್ಣವಾಗಿ ಸೋಲಿಸುವ ಮೂಲಕ ಎಡ ಪಕ್ಷಗಳ ಐಕ್ಯರಂಗ ಸರಕಾರ ಮಾರಿಷಸ್‌ನಲ್ಲಿ ಅಧಿಕಾರಕ್ಕೆ ಬಂದಿದೆ. 14 ವರ್ಷ ಬರ್ಬರ ಆಡಳಿತ ನಡೆಸಿದ ರಾಮ್‌ಗುಲಾಮ್‌ರಿಗೆ ಹೀನಾಯ ಸೋಲು. ಕೆಂಬಾವುಟದ ಧಿಗ್ವಿಜಯ.

ಒಂದು ಮಿಲಿಯ ಜನರ ಜೀವನಾಧಾರವಾದ ಕಬ್ಬು ಮಾರಿಷಸ್‌ನ ಪ್ರಮುಖ ಆರ್ಥಿಕ ಬೆಳೆ. ಇಲ್ಲಿನ ಬಂದರುಗಳ ಮೂಲಕ ವಿದೇಶಗಳಿಗೆ ರಫ್ತಾಗುವ ಸಕ್ಕರೆ "ಸಿಹಿ ಚಿನ್ನ" ವಾದರೂ ಇಲ್ಲಿ ದುಡಿಯುವ ಕಾರ್ಮಿಕರ ಬದುಕು ಮಾತ್ರ "ಹುಳಿ". ಈ ಪುಟ್ಟ ರಾಷ್ಟ್ರದಲ್ಲೂ 64000 ನಿರುದ್ಯೋಗಿಗಳು. ಕಳೆದ ದಶಕದಿಂದೀಚೆಗೆ ಕೆಂಬಾವುಟ ಈ ಜನರ ಸಂಗಾತಿ. ಹೋರಾಟದ ನಿಶಾನೆ ವ್ಯವಸ್ಥೆಯ ವಿರುದ್ಧ ಮರ್ಮಘಾತಕ ಹೊಡೆತ ನೀಡುವ ಕರೆಗೆ ಜನತೆಯಿಂದ ಬಹುಮತದ ಉತ್ತರ ಸಾರ್ವತ್ರಿಕ ಚುನಾವಣೆ. 550,000 ಮತದಾರರಲ್ಲಿ ಶೇಕಡ 90 ರಷ್ಟು ಜನ ಮತ ಚಲಾಯಿಸಿದರು. ಆಡಳಿತ ಪಕ್ಷವಾಗಿದ್ದ ನ್ಯಾಷನಲ್ ಎಲಾಯನ್ಸ್ ಪಾರ್ಟಿ (ಎನ್.ಎ.ಪಿ.)ಗೆ ತೀವ್ರ ಸೋಲು. ಮಾರ್ಕ್ಸ್‌ವಾದಿ ಧೋರಣೆಯ ಮಾರಿಷಸ್ ಮಿಲಿಟೆಂಟ್ ಮೂವ್‌ಮೆಂಟ್ (ಎಂ.ಎಂ.ಎಂ.) ಪಕ್ಷ ಹಾಗು ಮಾರಿಷಸ್ ಸೋಶಲಿಸ್ಟ್ ಪಕ್ಷ (ಪಿ. ಎಸ್. ಎಂ.)ಗಳ ಎಡರಂಗಕ್ಕೆ ಪ್ರಚಂಡ ಬಹುಮತ.

ಅಧಿಕಾರದಿಂದ ಕೆಳಗಿಳಿಯಲ್ಪಟ್ಟ ಸರಕಾರ ತೀರಾ ಬಲಪಂಥೀಯ ಧೋರಣೆಯನ್ನು ಅನುಸರಿಸುತ್ತಾ ಪಾಶ್ಚಿಮಾತ್ಯ ರಾಷ್ಟ್ರಗಳ ಭಟ್ಟಂಗಿತನ ಮಾಡುತ್ತಾ ವರ್ಣವಾದಿ ದಕ್ಷಿಣ ಆಫ್ರಿಕಾದಿಂದ ಹಣದ ನೆರವು ಪಡೆದುಕೊಂಡಿತು. ಸಿ.ಐ.ಎ.ಯಿಂದಲೂ ಅಪಾರ ಹಣಗಳಿಸಿತ್ತು. ಹೀಗಿದ್ದಾಗ್ಯೂ ಚುನಾವಣೆಯಲ್ಲಿ ಒಂದು ಸ್ಥಾನವನ್ನೂ ಗೆಲ್ಲಲಾಗಲಿಲ್ಲ. ಎಡರಂಗ ರಚಿಸಿಕೊಂಡಿದ್ದ ಎಂ.ಎಂ.ಎಂ. ಹಾಗು ಪಿ. ಎಸ್. ಎಂ. ಪಕ್ಷಗಳು ಚುನಾವಣೆ ನಡೆದ 62 ಸ್ಥಾನಗಳಲ್ಲಿ 60ನ್ನು ಗೆದ್ದುಕೊಂಡವು. ಈ ರಂಗದ ಮಿತ್ರ ಪಕ್ಷವಾದ ರಾಡ್ರಿಗಸ್ ದ್ವೀಪದ "ರಾಡ್ರಿಗಸ್ ಪೀಪಲ್ಸ ಆರ್ಗನೈಜೇಶನ್" ಪಕ್ಷವು ಉಳಿದೆರಡು ಸ್ಥಾನಗಳನ್ನು ಗೆದ್ದುಕೊಂಡಿತು. ಚಲಾಯಿಸಲ್ಪಟ್ಟ ಮತಗಳಲ್ಲಿ ಶೇಕಡ 70ಕ್ಕೂ ಹೆಚ್ಚು ಮತಗಳು ಎಡರಂಗಕ್ಕೆ ಪರವಾಗಿದ್ದವು.

70 ಶೇಕಡ ಭಾರತೀಯ ಮೂಲ ನಿವಾಸಿಗಳೇ ಇರುವ ಈ ಬಹುವರ್ಣ ಸಮಾಜದಲ್ಲಿ ಅಲ್ಪ ಸಂಖ್ಯಾತರಿಗೆ ಪ್ರಾತಿನಿಧ್ಯವನ್ನು ಖಾತರಿಪಡಿಸಲು ಇಲ್ಲಿನ ಸಂಕೀರ್ಣವಾದ ಚುನಾವಣಾ ಪದ್ಧತಿ ರೀತ್ಯ ಇನ್ನೂ 8 ಸೀಟುಗಳ ವಿತರಣೆಯಾಗಬೇಕಾಗಿದೆ ತಮ್ಮ ಪಕ್ಷದಲ್ಲಿ ಎಲ್ಲಾ ಅಲ್ಪ ಸಂಖ್ಯಾತ ವರ್ಗದವರಿಗೂ ಪ್ರಾತಿನಿಧ್ಯ ಲಭ್ಯವಾಗಿರುವ ಕಾರಣದಿಂದ ಈ 8 ಸೀಟುಗಳ ವಿತರಣೆ ಅಗತ್ಯವಿಲ್ಲವೆನ್ನುವುದು ಜಯಗಳಿಸಿರುವ ಮಾರ್ಕ್ಸ್‌ವಾದಿ ಎಂ ಎಂ.ಎಂ. ಪಕ್ಷದ ನಿಲುವು.

ಕಳೆದ ಒಂದು ದಶಕದಿಂದಲೇ ಮಾರಿಷಸ್‌ನ ಜನತೆ ಪ್ರಧಾನಿ ರಾಮ್‌ಗುಲಾಮ್‌ರವರ ಆಡಳಿತವು ಅನುಸರಿಸುತ್ತಿದ್ದ ಆರ್ಥಿಕ ನೀತಿ ಹಾಗು ಪಾಶ್ಚಿಮಾತ್ಯ ಪರವಾದ ನಿಲುವುಗಳಿಂದ ನಿರಾಶರಾಗಿದ್ದರು. ಶೇಕಡ 80 ರಷ್ಟು ಅವಿದ್ಯಾವಂತರಿರುವ ಈ ದ್ವೀಪ ರಾಷ್ಟ್ರವು ಹಿಂದುಳಿದ ರಾಷ್ಟ್ರಗಳ ಪಟ್ಟಿಯಲ್ಲಿ ಮೊದಲನೆಯ ಸ್ಥಾನ ಪಡೆದಿದೆ. ದೇಶದ ಇಡೀ ಅರ್ಥ ವ್ಯವಸ್ಥೆ ಕಬ್ಬಿನ ಬೆಳೆಯನ್ನು ಆಶ್ರಯಿಸಿದ್ದು ರಫ್ತುಗಳಿಕೆಯ 90 ಭಾಗ ಸಕ್ಕರೆಯಿಂದಲೇ ಬರುತ್ತಿದೆ. ದೇಶದ ಒಟ್ಟು ಸಕ್ಕರೆ ಉತ್ಪಾದನೆಯ 62 ಶೇಕಡದಷ್ಟನ್ನು ಉತ್ಪಾದಿಸುವ 23 ದೊಡ್ಡ ಕಬ್ಬಿನ ತೋಟದ ಮಾಲಿಕರುಗಳ ಕೈಯಲ್ಲಿ ದೇಶದ ಸಂಪತ್ತು ಕೇಂದ್ರೀಕರಿಸಲ್ಪಟ್ಟಿದೆ. ಉಳಿದ ಸಕ್ಕರೆ ಉತ್ಪಾದನೆ 26,000 ಸಣ್ಣ ಹಿಡುವಳಿದಾರರಿಂದ ಆಗುತ್ತಿದೆ. ಸಕ್ಕರೆಯನ್ನಷ್ಟೇ ನಂಬಿ ಕುಳಿತಿರುವ ಮಾರಿಷಸ್‌ನ ಅರ್ಥವ್ಯವಸ್ಥೆ ಈಗ ಅಂತರರಾಷ್ಟ್ರೀಯ ಮಾರುಕಟ್ಟೆಯ ಕುಸಿತದಿಂದಾಗಿ ತೀವ್ರವಾಗಿ ಬಾಧಿಸಲ್ಪಟ್ಟಿದೆ 1981 ಸೆಪ್ಟೆಂಬರ್‌ನಲ್ಲಿ ಶೇಕಡ 20ರಷ್ಟು ಇಲ್ಲಿನ ರೂಪಾಯಿಯ ಬೆಲೆ ಅಪಮೌಲ್ಯಗೊಳಿಸಲ್ಪಟ್ಟಿತು.

320,000 ದಷ್ಟಿರುವ ಬಲಿಷ್ಠ ಕಾರ್ಮಿಕ ಶಕ್ತಿ, ಶೇಕಡ 20ರಷ್ಟಿರುವ ನಿರುದ್ಯೋಗ ಸಮಸ್ಯೆ, ಕಳೆದ 3 ವರ್ಷಗಳಲ್ಲಿ ಸರಾಸರಿ ಶೇಕಡ 25ರಷ್ಟು ಹೆಚ್ಚಾದ ಹಣದುಬ್ಬರ, 50,000 ದಷ್ಟಿರುವ ನಿವೇಶನರಹಿತರು- ಈ ಎಲ್ಲದರ ನಡುವೆ ಎಂ. ಎಂ. ಎಂ. ಪಕ್ಷ ಪರ್ಯಾಯವಾಗಿ ಮೂಡಿ ಬಂತು. 1969ರಲ್ಲಿ ಮಾರ್ಕ್ಸ್‌ವಾದಿ ಬುದ್ಧಿಜೀವಿಗಳ ಒಂದು ಗುಂಪಿನಿಂದ ಸ್ಥಾಪಿಸಲ್ಪಟ್ಟ ಈ ಪಕ್ಷದ ಸಮರ್ಥ ಮುಂದಾಳು ಪಾಲ್ ಬೆರೆಂಗರ್; 1968ರಲ್ಲಿ ಸ್ಫೋಟಗೊಂಡ ಪಾರಿಸ್ ಮುಷ್ಕರದ ಮೂಲಕ ರಾಜಕೀಯ ಪ್ರವೇಶಮಾಡಿದ ಬೆರೆಂಗರ್ ಹೊಸ ಪಕ್ಷದ ಸಂಘಟನೆಯಲ್ಲಿ ತೊಡಗಿದರು. ಮೊದಲು ಸಕ್ಕರೆ ಕಾರ್ಖಾನೆಯ ಹಾಗು ಬಂದರು ಕಾರ್ಮಿಕರ ನಡುವೆ ಪಕ್ಷದ ಬೆಳವಣಿಗೆ. ನಂತರ ವಿದ್ಯಾರ್ಥಿಗಳ ಸಂಘಟನೆ. ಪ್ರಭಾವಶಾಲಿಯಾಗಿ ಬೆಳೆದ ಪಕ್ಷ 1970-71ರಲ್ಲಿ ಮುಷ್ಕರಗಳ ಸರಮಾಲೆಯನ್ನೇ ಸಂಘಟಿಸಿತು. ಇದರಿಂದ ತತ್ತರಿಸಿದ ರಾಮ್‌ಗುಲಾಮ್ ಸರಕಾರ ದೇಶದಾದ್ಯಂತ ತುರ್ತು ಪರಿಸ್ಥಿತಿ ಘೋಷಿಸಿ ಎಂ. ಎಂ. ಎಂ. ಪಕ್ಷದ ನೂರಾರು ಮುಖಂಡರನ್ನು ಸೆರೆಮನೆಗೆ ತಳ್ಳಿತು. 1978, ಬ್ರಿಟೀಷ್ ವಸಾಹತುಶಾಹಿಗಳಿಂದ ಸ್ವಾತಂತ್ರ್ಯ ಪಡೆದ ಮಾರಿಷಸ್‌ನ 10ನೇ ವಾರ್ಷಿಕೋತ್ಸವ. ತುರ್ತುಪರಿಸ್ಥಿತಿ ರದ್ದಾಯಿತು. ಸರ್ವಾಧಿಕಾರಿ ರಾಮ್‌ಗುಲಾಮ್ ವಿರುದ್ಧ ತೀವ್ರ ಹೋರಾಟ ನಡೆಸಿದ ಎಂ. ಎಂ. ಎಂ. ಪಕ್ಷ ಪ್ರಬಲವಾಗಿ ಹೊರಹೊಮ್ಮಿತು.

ಸಾರ್ವತ್ರಿಕ ಮುಷ್ಕರಗಳನ್ನು ಸಂಘಟಿಸಿ ಬಂಧನಕೊಳಪಟ್ಟಿದ್ದ ಹಾಗು ತಮ್ಮ ಮೇಲೆ ನಡೆದ ಕೊಲೆ ಪ್ರಯತ್ನದಿಂದ ತಪ್ಪಿಸಿಕೊಂಡ ಬೆರೆಂಗರ್ ಈಗ ಎಂ.ಎಂ.ಎಂ. ಮತ್ತು ಪಿ. ಎಸ್. ಎಂ. ಪಕ್ಷಗಳ ಮೈತ್ರಿಕೂಟದ ಚಾಲಕ ಶಕ್ತಿಯಾಗಿದ್ದಾರೆ. 1976ರ ಚುನಾವಣಾ ಘೋಷಣೆಯಲ್ಲಿದ್ದ ಸಂಪೂರ್ಣ ರಾಷ್ಟ್ರೀಕರಣದ ಹೇಳಿಕೆ ಈಗ ಸ್ವಲ್ಪ ಬದಲಾಗಿದ್ದು "ಮಾರಿಷಸ್‌ನ ಹಾಗೂ ಸುತ್ತಮುತ್ತಲಿನ ಜಗತ್ತಿನ ವಾಸ್ತವತೆಗೆ ಅನುಗುಣವಾಗಿ" ಎಂದು ಸೇರಿಸಲಾಗಿದೆ. ತೀವ್ರ ಬದಲಾವಣೆಯ ನೀತಿಯನ್ನು ಸ್ವಲ್ಪ ಸಾವಧಾನಗೊಳಿಸಿರುವ ಹೊಸ ಸರಕಾರವು ಸದ್ಯಕ್ಕೆ ದೊಡ್ಡ ಕಬ್ಬಿನ ತೋಟಗಳನ್ನು ಮಾತ್ರ ರಾಷ್ಟ್ರೀಕರಿಸುವ, ಖಾಸಗಿ ನಿಯಂತ್ರಿತ ಪ್ರವಾಸಿ ಹೋಟೆಲುಗಳ ಮೇಲೆ 51 ಶೇಕಡದಷ್ಟು ಸರಕಾರಿ ಹಕ್ಕನ್ನು ಸ್ಥಾಪಿಸುವ, ಸಂಪತ್ತಿನ ಮೇಲೆ ತೆರಿಗೆ ವಿಧಿಸುವ ಇವೇ ಮೊದಲಾದ ಕ್ರಮ ಕೈಗೊಳ್ಳುವುದಾಗಿ ಘೋಷಿಸಿದೆ. ಉದ್ಯೋಗ ಅವಕಾಶ ಸೃಷ್ಟಿಸುವ ಮಹತ್ತರವಾದ ಪ್ರತಿಜ್ಞೆ ಮಾಡಿದೆ. ಈ ಹಿಂದಿನ ಪ್ರತಿಗಾಮಿ ಸರಕಾರದ ಆಳ್ವಿಕೆಯ ಕಾಲದಲ್ಲಿ ಕ್ಯಾನ್ಸರ್ ರೂಪದಲ್ಲಿ ಬೆಳೆದಿದ್ದ ಭ್ರಷ್ಟಾಚಾರ ಹಾಗು ತೆರಿಗೆಗಳ್ಳತನಗಳ ವಿರುದ್ಧ ತೀವ್ರ ಕ್ರಮ ಕೈಗೊಳ್ಳುವುದಾಗಿ ವಾಗ್ದಾನ ಮಾಡಿದೆ.

ಹೊಸ ಸರಕಾರದ ವಿದೇಶಧೋರಣೆ ಗಮನ ಸೆಳೆಯುವಂತದ್ದು. ಈ ಸರಕಾರ ವಸಾಹತುಶಾಹಿ ನೀತಿಗಳ ವಿರುದ್ಧ ಹೋರಾಡಲು ಹಾಗು ಡಿಗೋಗಾರ್ಸಿಯವನ್ನು ಮಾರಿಷಸ್‌ಗೆ ಹಿಂದಿರುಗಿಸುವಂತೆ ಒತ್ತಾಯಿಸಲು ನಿರ್ಧರಿಸಿದೆ. ಹಿಂದೂ ಮಹಾಸಾಗರವನ್ನು ಶಾಂತಿವಲಯವನ್ನಾಗಿ ಮಾಡಲು ಹಾಗು ಡಿಗೋಗಾರ್ಸಿಯದಲ್ಲಿ ಅಮೇರಿಕಾದ ಸೈನ್ಯ ಚಟುವಟಿಕೆಯನ್ನು ವಿರೋಧಿಸಲು ಹೊಸ ಸರ್ಕಾರ ಕಟಿಬದ್ಧವಾಗಿದೆಯೆಂದು ಹೊಸ ಪ್ರಧಾನಿ ಅನಿರುದ್ ಜಗನ್ನಾಥ್ ಹೇಳಿದ್ದಾರೆ ಈ ಬಗ್ಗೆ ಅಂತರರಾಷ್ಟ್ರೀಯ ನ್ಯಾಯಾಲಯವೂ ಸೇರಿದಂತೆ ಎಲ್ಲಾ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಮಾರಿಷಸ್ ಚರ್ಚಿಸಲಿದೆ.

ಬ್ರಿಟನ್ನಿನಲ್ಲಿ ವಿಲ್ಸನ್ ಮತ್ತು ಹೀತ್ ಸರ್ಕಾರಗಳಿದ್ದಾಗ ಬಲತ್ಕಾರವಾಗಿ ಡಿಗೋಗಾರ್ಸಿಯಾದ ಎಲ್ಲಾ ಜನರನ್ನು ಮಾರಿಷಸ್‌ಗೆ ಎತ್ತಂಗಡಿ ಮಾಡಲಾಯಿತು. ಇಂದು ಇಲ್ಲಿ ಅಮೇರಿಕಾದ ಮಿಲ್ಟ್ರಿ ಮೇಳ ನಡೆಯುತ್ತಿದೆ. ಪರಿಣಾಮವಾಗಿ ಸುತ್ತಮುತ್ತಲ ದೇಶಗಳಿಗೆ ಅಪಾಯ ತಲೆದೋರಿದೆ.

ಮಾರಿಷಸ್‌ನ ಬೆಳವಣಿಗೆ ಪಶ್ಚಿಮ ದೇಶಗಳನ್ನು ಚಕಿತಗೊಳಿಸಿದೆ. ಡಿಗೋಗಾರ್ಸಿಯವನ್ನು ಮಾರಿಷಸ್‌ಗೆ ನೀಡುವಲ್ಲಿ ಮಾತುಕತೆ ಸಾಧ್ಯವಿಲ್ಲವೆನ್ನುವ ಬ್ರಿಟನ್ ಇನ್ನೊಂದು "ಫಾಕ್‌ಲೆಂಡ್" ಬೀಜಬಿತ್ತಲಿದೆ.

ಮಾರಿಷಸ್ ಚುನಾವಣಾ ಫಲಿತಾಂಶ ವರ್ಣವಾದಿ ದಕ್ಷಿಣ ಆಫ್ರಿಕಾದ ಸರಕಾರಕ್ಕೆ ಉರುಳಾಗಿ ಪರಿಣಮಿಸಿದೆ ಕಳೆದ ದಶಕದಲ್ಲಿ ಶಿಚೆಲ್ಲಿಸ್, ಮಲಗಸ್ಸಿ, ಮೊಜಾಂಬಿಕ್, ಜಿಂಬಾವೆ ಮತ್ತು ಅಂಗೋಲ ರಾಷ್ಟ್ರಗಳೆಲ್ಲವೂ ವಾಮ ಪಂಥದತ್ತ ವಾಲಿದವು.

—ಕುಮಾರ್ ಕುಂದಾಪುರ

ಬೆಂಗಳೂರಿನಲ್ಲಿ ಜುಲೈ ೨೩ ರಿಂದ ಸಿ.ಐ.ಟಿ.ಯು. ಅಖಿಲ ಭಾರತ ಕಾರ್ಯಕಾರಿ ಸಮಿತಿಯ ಸಭೆ

1970ರ ಮೇ ಯಲ್ಲಿ ಸಿ.ಐ ಟಿ. ಯು. ಸ್ಥಾಪನೆಯಾದನಂತರ ಸಿ.ಐ ಟಿ. ಯು.ಕಾರ್ಯಕಾರಿ ಸಮಿತಿಯಸಭೆಯು ಮೊದಲ ಬಾರಿಗೆ ಬೆಂಗಳೂರಿನಲ್ಲಿ ನಡೆಯಲಿದೆ. ಸಿ.ಐ.ಟಿ.ಯು. ಅಧ್ಯಕ್ಷ ಕಾಂ। ಬಿ ಟಿ. ರಣದಿವೆ ಈ ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಾರೆ

ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಕಾಂ। ಜ್ಯೋತಿ ಬಸು, ಉಪ ಮುಖ್ಯ ಮಂತ್ರಿ ಕಾಂ। ಕೃಷ್ಣಪಾದಘೋಷ್, ಸಚಿವರುಗಳಾದ ಕಾಂ। ರಾಧಿಕಾ ಬ್ಯಾನರ್ಜಿ, ಕಾಂ। ಪರಿಮಳ ಮಿತ್ರ, ಕಾಂ। ಶಾಂತಿ ಘಟಕ್, ಕಾಂ। ಪ್ರಳಯ ತಾಲೂಕ್‌ದಾರ್, ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಭಾಗವಹಿಸುವ ಅಖಿಲ ಭಾರತ ಕಾರ್ಮಿಕ ಮುಖಂಡರ ಪೈಕಿ ಕೆಲವರು.

ಕಾರ್ಯಕಾರಿ ಸಮಿತಿ ಸದಸ್ಯರೂ ಪದಾಧಿಕಾರಿಗಳೂ, ಸಂಸತ್ ಸದಸ್ಯರೂ ಆಗಿರುವ ಸಿ ಐ ಟಿ.ಯು. ಪ್ರಧಾನ ಕಾರ್ಯದರ್ಶಿ ಕಾಂ। ಪಿ ರಾಮಮೂರ್ತಿ, ಎಂ.ಪಿ., ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ಕಾಂ। ಸಮರ ಮುಖರ್ಜಿ ಎಂ.ಪಿ , ಕಾಂ। ಇ. ಬಾಲಾನಂದನ್ ಎಂ ಪಿ., ಕಾಂ। ನಿರೇನ್ ಘೋಷ್ ಎಂ.ಪಿ., ಕಾಂ। ಮಹಮ್ಮದ್ ಇಸ್ಮಾಯಿಲ್ ಎಂ.ಪಿ., ಕಾಂ। ಸುಶೀಲಾ ಗೋಪಾಲನ್ ಎಂ.ಪಿ., ಕಾಂ। ಅನಂದ ಪಾಠಕ್ ಎಂ.ಪಿ., ಕಾಂ। ಎಂ. ಎಂ. ಲಾರೆನ್ಸ್ ಎಂ.ಪಿ., ಕಾಂ। ಓ. ಜೆ. ಜೋಸೆಫ್ ಎಂ.ಪಿ., ಕಾಂ। ಸುಶೀಲ ಭಟ್ಟಾಚಾರ್ಯ ಎಂ.ಪಿ., ಅವರುಗಳು ಈ ಸಭೆಯಲ್ಲಿ ಭಾಗ ವಹಿಸಲಿದ್ದಾರೆ.

ಕಳೆದ 4 ರಂದು ನಡೆದ ಸಿ.ಐ ಟಿ. ಯು.ವಿನ ಕರ್ನಾಟಕ ರಾಜ್ಯ ಸಮಿತಿಯ ಸಭೆಯು ಈ ಅಖಿಲ ಭಾರತ ಸಭೆಗೆ ಒಂದು ಸ್ವಾಗತ ಸಮಿತಿಯನ್ನು ರಚಿಸಿದೆ. ಐವತ್ತು ಸದಸ್ಯರಿರುವ ಈ ಸ್ವಾಗತ ಸಮಿತಿಗೆ ಕಾಂ। ಎಸ್. ಸೂರ್ಯನಾರಾಯಣರಾವ್ ಅಧ್ಯಕ್ಷರು, ಕಾಂ। ಸಿ. ನಂಜುಂಡಪ್ಪ ಪ್ರಧಾನ ಕಾರ್ಯದರ್ಶಿ, ಕಾಂ। ಪಿ. ಕೆ. ಸುಬ್ರಮಣಿ ಖಜಾಂಚಿಯಾಗಿರುತ್ತಾರೆ. ಕಾಂ। ವಿ. ಜೆ. ಕೆ. ನಾಯರ್, ಕಾಂ। ರೇವಣ್ಣ, ಉಪಾಧ್ಯಕ್ಷರುಗಳಾಗಿಯೂ ಕಾಂ। ಟಿ. ಎಸ್. ಅನಂತರಾವ್, ಕಾಂ। ಕೆ. ವಿ. ಶ್ರೀನಿವಾಸನ್, ಕಾಂ। ಮಹಮದ್ ದಸ್ತಗೀರ್, ಕಾಂ। ಟಿ. ಎಸ್. ಮಣಿ ಕಾರ್ಯದರ್ಶಿಗಳಾಗಿರುತ್ತಾರೆ.

ಕಾರ್ಯಕಾರಿ ಸಮಿತಿಯ ಕೊನೆಯ ದಿವಸ 25ರ ಸಂಜೆ ಬಹಿರಂಗ ಸಭೆ ನಡೆಯಲಿದ್ದು ಈ ಸಭೆಯಲ್ಲಿ 50000 ಜನರು ಭಾಗವಹಿಸುವ ನಿರೀಕ್ಷೆ ಇದೆ.

ಸಿ. ಐ. ಟಿ. ಯು. ಪ್ರಧಾನ ಕಾರ್ಯದರ್ಶಿ ಕಾಂ। ನಂಜುಂಡಪ್ಪನವರು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸುವ ಮಹತ್ಕಾರ್ಯದಲ್ಲಿ ಎಲ್ಲಾ ಕಾರ್ಮಿಕ ನೌಕರರ ಸಹಕಾರ ಸಹಾಯಗಳನ್ನು ಕೋರಿದ್ದಾರೆ.

ಭಾರತ ದರ್ಶನ

ಬಿಹಾರದ ಅಧ್ಯಾಪಕರಿಂದ

ಪಾಟ್ನಾದಲ್ಲಿ ಭಾರೀ ಪ್ರದರ್ಶನ

ಕಳೆದ ಏಪ್ರಿಲ್ 12 ರಿಂದ ಮುಷ್ಕರದಲ್ಲಿರುವ ಬಿಹಾರಿನ ಎಲ್ಲಾ ವಿಶ್ವವಿದ್ಯಾನಿಲಯಗಳು ಹಾಗೂ ಕಾಲೇಜುಗಳ ಹತ್ತು ಸಾವಿರ ಅಧ್ಯಾಪಕರು ಜೂನ್ 29 ರಂದು ಪಾಟ್ನಾದಲ್ಲಿ ಬೃಹತ್ ಪ್ರದರ್ಶನ ನಡೆಸಿದರು. ತಮ್ಮ ಸಂಬಳ-ಸಾರಿಗೆ, ಸೇವಾ ಭದ್ರತೆ ಮಾತ್ರವಲ್ಲ ವಿಶ್ವವಿದ್ಯಾನಿಲಯಗಳಿಗೆ ಸ್ವಯಮಾಧಿಕಾರ, ವಿಶ್ವವಿದ್ಯಾನಿಲಯ ಕಾನೂನಿನಲ್ಲಿ ಅಧ್ಯಾಪಕ ವಿರೋಧೀ ಅಂಶಗಳನ್ನು ತೆಗೆದುಹಾಕುವುದು ಇತ್ಯಾದಿ 31 ಅಂಶಗಳ ಬೇಡಿಕೆಯ ಈಡೇರಿಕೆಗಾಗಿ ಅಧ್ಯಾಪಕರು ಈ ಹಿಂದೆ ಸ್ವತಃ ಅಧ್ಯಾಪಕನಾಗಿದ್ದು, ಈಗ ಮುಖ್ಯ ಮಂತ್ರಿಯಾಗಿರುವಾತನ ಪೋಲೀಸರ ಲಾಠಿ, ಬಂಧನಗಳಿಗೆ ಬೆದರದೆ ತಮ್ಮ ಮುಷ್ಕರವನ್ನು ಹುಮ್ಮಸ್ಸಿನಿಂದ ಮುಂದುವರಿಸುತ್ತಿದ್ದಾರೆ. ಹಲವು ಬಾರಿ ಮಾತುಕತೆಯ ಆಶ್ವಾಸನೆ ನೀಡಿ ಮೋಸ ಮಾಡಿದ ಸರಕಾರದ ದಮನಕಾರೀ ನೀತಿಯ ವಿರುದ್ಧ ತಮ್ಮ ತೀವ್ರ ಅಸಮಾಧಾನವನ್ನು ಅವರು ಜೂನ್ 29 ರಂದು ಸ್ಪಷ್ಟಪಡಿಸಿದ್ದಾರೆ.

ಬಲವಾದ ಪೋಲೀಸ್ ಬಂದೋಬಸ್ತು ಒಂದೆಡೆ, ಇನ್ನೊಂದೆಡೆ ರಣಬಿಸಿಲು ಮತ್ತು ಧಾರಾಕಾರ ಮಳೆ ಯಾವುದಕ್ಕೂ ಜಗ್ಗದೆ ಅಧ್ಯಾಪಕರು ನಡೆಸಿದ ಮೆರವಣಿಗೆ, ಪ್ರದರ್ಶನ ಕಾಂಗ್ರೆಸ್ (ಐ) ಸರಕಾರದ ಅಧ್ಯಾಪಕ ವಿರೋಧೀ, ಜನವಿರೋಧಿ ಸ್ವಭಾವವನ್ನು ಬಯಲು ಮಾಡಿದೆ.

ದಿಲ್ಲಿ ಪತ್ರಕರ್ತರ ಸಂಘ :

ಸಿ. ಪಿ. ಐ. ಸಮಯಸಾಧಕತನ

ದಿಲ್ಲೀ ಪತ್ರಕರ್ತರ ಸಂಘದ ಚುನಾವಣೆಗಳಲ್ಲಿ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ನಡೆದ ನೇರ ಸ್ಪರ್ಧೆಯಲ್ಲಿ ಸಿ.ಪಿ.ಐ. (ಎಂ)ನ ಅಭ್ಯರ್ಥಿ ಎಸ್. ಕೆ. ಪಾಂಡೆಯವರು ಸಿ. ಪಿ. ಐ. ಅಭ್ಯರ್ಥಿ ಸಂತೋಷ್ ಕುಮಾರ್ ಅವರನ್ನು ಸೋಲಿಸಿ ಸಿ. ಪಿ. ಐ. ತನ್ನ ಸಮಯಸಾಧಕತನದ ಫಲವನ್ನುಣ್ಣುವಂತಾಗಿದೆ. ಕಳೆದ ಚುನಾವಣೆಗಳಲ್ಲೂ ಹೀಗೆ ಆಗಿತ್ತು.

1980ರ ಚುನಾವಣೆಗಳಿಂದ ಹಿಡಿದು ಪ್ರತಿಯೊಂದು ಸಂದರ್ಭದಲ್ಲೂ ಐಕ್ಯತೆ ಸಾಧಿಸುವ ಸಿ.ಪಿ.ಐ (ಎಂ)ನ ಪ್ರಯತ್ನಗಳನ್ನು ಸಿ.ಪಿ ಐ. ಮುರಿದು ಹಾಕಿತ್ತು. ಮಾತ್ರವಲ್ಲ, ಈ ಸಲದ ಚುನಾವಣೆಗಳಲ್ಲಿ ಸಿ. ಪಿ ಐ (ಎಂ) ವಿರುದ್ಧ ಕುಪ್ರಸಿದ್ಧ ಎಡವಿರೋಧಿಗಳೂ ಇರುವಂತಹ ಅಪವಿತ್ರಕೂಟವನ್ನುಅದು ಏರ್ಪಡಿಸಿಕೊಂಡಿತು. ಆ ಕೂಟದಲ್ಲಿ ನಕ್ಸಲೀಯ, ಆರ್. ಎಸ್. ಎಸ್. ಮಾತ್ರವಲ್ಲ, ಆರ್. ಜೆ. ಮೆಹ್ತಾನಂತಹ ಕಾರ್ಮಿಕ ಸಂಘಟನೆಯನ್ನು ತನ್ನ ಕಸುಬಾಗಿ ಮಾಡಿಕೊಂಡು ಪತ್ರಕರ್ತರ ಅಖಿಲಭಾರತ ಸಂಘಟನೆಗಳನ್ನು ಒಡೆಯಲು ಪ್ರಯತ್ನಿಸಿದವರೂ ಇದ್ದರು. ಇನ್ನೊಂದು ಗಮನೀಯ ಅಂಶವೆಂದರೆ ಕಳೆದ ಕೆಲವು ವರ್ಷಗಳಿಂದ ಪತ್ರಿಕಾರಂಗದ ನೌಕರರ ಚಳುವಳಿಯಲ್ಲಿ ಸಿ.ಪಿ.ಐ.ಯನ್ನು ಸಿ.ಪಿ ಐ(ಎಂ) ಸತತವಾಗಿ ರಕ್ಷಿಸುತ್ತಾ ಬಂದಿತ್ತು. ತುರ್ತು ಪರಿಸ್ಥಿತಿಯಲ್ಲಿ ಸಿ. ಪಿ. ಐ. ಪತ್ರಕರ್ತರ ನಾಚಿಕೆಗೆಟ್ಟ ವರ್ತನೆಯಿಂದಾಗಿ 1977ರ ನಂತರ ಪತ್ರಿಕಾರಂಗದಲ್ಲಿ ಸಿ ಪಿ.ಐ ನವರು ತುಚ್ಛೀಕಾರಕ್ಕೊಳಗಾದಾಗ ಅವರನ್ನು ಪತ್ರಿಕಾರಂಗದ ನೌಕರರ ಚಳವಳಿಯಿಂದಲೇ ಹೊರಗಟ್ಟಲು ನಡೆಸಿದ ಪ್ರಯತ್ನಗಳನ್ನು ವಿಫಲಗೊಳಿಸಿದ್ದು ಸಿ ಪಿ ಐ. (ಎಂ). ಪತ್ರಿಕಾರಂಗದಲ್ಲಿರುವ ಸಿ. ಪಿ. ಐ. ನ ತರುಣ ಕಾರ್ಯಕರ್ತರೂ ತಮ್ಮ ಹಿರಿಯ ನಾಯಕರ ಈ ಸಮಯಸಾಧಕತನದ ಬಗ್ಗೆ ಕಳವಳಗೊಂಡಿದ್ದಾರೆ.

ಒರಿಸ್ಸಾ :

ಅತ್ತ ಚಂಡಮಾರುತ - ಇತ್ತ ಪೋಲೀಸ್ ಗುಂಡು

ಜೂನ್ 3 ರಂದು ಒರಿಸ್ಸಾ ಕರಾವಳಿಯನ್ನು ಅಪ್ಪಳಿಸಿದ ಚಂಡಮಾರುತ ರಾಜ್ಯದ ಏಳು ಜಿಲ್ಲೆಗಳ 17 ಉಪ ವಿಭಾಗಗಳಲ್ಲಿ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳ ಹಾನಿಯುಂಟು ಮಾಡಿದೆ. ಐನೂರಕ್ಕೂ ಮಿಕ್ಕಿ ಜನ ಪ್ರಾಣಕಳೆದುಕೊಂಡಿದ್ದಾರೆ, ಸಾವಿರಾರು ಜಾನುವಾರುಗಳು ಕೊಚ್ಚಿ ಹೋಗಿವೆ. ಸುಮಾರಾಗಿ ಎಲ್ಲಾ ಮರಗಳು ಬಿದ್ದು ಹೋಗಿವೆ. ಸುಮಾರು 75 ಲಕ್ಷ ಜನ ಚಂಡಮಾರುತದಿಂದ ತತ್ತರಿಸಿ ಹೋಗಿ ಪರಿಹಾರದ ನಿರೀಕ್ಷೆಯಲ್ಲಿದ್ದಾರೆ. ಆದರೆ ಬಾಲಾಸೂರ್ ಜಿಲ್ಲೆಯ ಅರಡಿಯ ಇಂತಹ ಪೀಡಿತ ಜನತೆಗೆ ಪರಿಹಾರದ ಬದಲು ಸಿಕ್ಕಿದ್ದು ಪೋಲೀಸರ ಗುಂಡಿನೇಟು. ಜೂನ್ 27ರಂದು ನಡೆದ ಈ ಪೋಲೀಸ್ ಗೋಲೀಬಾರಿಗೆ ಗೋವಿಂದ ದಾಸ್ ಎಂಬ 60 ವರ್ಷದ ಹಿರಿಯ ಬಲಿಯಾಗಿದ್ದಾನೆ. ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ

ಬಾಲಾಸೂರ್ ಜಿಲ್ಲೆಯ ಅರಡಿಯೂ ಸೇರಿದಂತೆ ಸುತ್ತಮುತ್ತಲ ಹಳ್ಳಿಗಳಲ್ಲಿ ಚಂಡಮಾರುತದಿಂದಾದ ಹಾನಿಯ ಅಂದಾಜು ಮಾಡಲು, ಅದನ್ನೆದುರಿಸಬೇಕಾಗಿ ಬಂದ ಜನತೆಯ ತೊಂದರೆಗಳನ್ನು ತಿಳಿಯಲು, ಹಾಗು ಪರಿಹಾರ ಹೇಗೆ ಹಂಚಲ್ಪಡುತ್ತಿದೆಯೆಂದು ನೋಡಲು ಸಂಸತ್ತಿನಲ್ಲಿ ಸಿ.ಪಿ ಐ.(ಎಂ)ನ ನಾಯಕ ಹಾಗೂ ಪಾಲಿಟ್‌ಬ್ಯೂರೊ ಸದಸ್ಯ ಕಾಂ। ಸಮರ್ ಮುಖರ್ಜಿ ಒರಿಸ್ಸಾದ ರಾಜ್ಯ ಸಮಿತಿಯ ಕಾರ್ಯದರ್ಶಿ ಹಾಗೂ ಇತರ ಸಂಗಾತಿಗಳೊಂದಿಗೆ ಹೋಗಿದ್ದರು. ಪರಿಹಾರ ಪಡೆಯಲು ವಿಶೇಷ ತಹಸಿಲ್ದಾರರ ಸುತ್ತ ನೆರೆದಿದ್ದ ಜನ ತಮ್ಮ ಕುಂದುಕೊರತೆಗಳನ್ನು ತಿಳಿದುಕೊಂಡು ಸಂಸತ್ತಿನ ಒಳಗೆ ಹಾಗೂ ಹೊರಗೆ ಅದನ್ನು ತಿಳಿಯಪಡಿಸಲು ಈ ತಂಡ ಬಂದಿದೆಯೆಂದು ಗೊತ್ತಾದಾಗ ಇವರ ಸುತ್ತ ನೆರೆದು ತಮ್ಮ ಸಂಕಷ್ಟಗಳನ್ನು ತೋಡಿಕೊಳ್ಳಲಾರಂಭಿಸಿದರು. ರೆವಿನ್ಯೂ ಇನ್ಸ್‌ಪೆಕ್ಟರಿಗೆ ಪರಿಹಾರದ 20% ಕಮಿಷನ್ ರೂಪದಲ್ಲಿ ಕೊಡದಿದ್ದರೆ ಏನೂ ಪರಿಹಾರ ಸಿಗುವುದಿಲ್ಲ ಎಂಬುದು ಎಲ್ಲರಿಂದಲೂ ಕೇಳಿ ಬಂದ ಪ್ರಮುಖ ದೂರಾಗಿತ್ತು. ಇದನ್ನು ತಹಸಿಲ್ದಾರರ ಗಮನಕ್ಕೆ ತಂದಾಗ ಈ ಬಗ್ಗೆ ಎಲ್ಲರೂ ಬರಹ ಮೂಲಕ ದೂರು ಕೊಟ್ಟರೆ ತಕ್ಕ ಕ್ರಮ ಕೈಗೊಳ್ಳುವುದಾಗಿ ತಹಸಿಲ್ದಾರರು ಹೇಳಿದರು. ಇದೆಲ್ಲಾ ನಡೆಯುವಾಗ ಪರಿಹಾರ ಹಂಚುತ್ತಿದ್ದ ಕಾಂಗ್ರೆಸ್ (ಐ) ಜನ ಸಿಡಿಮಿಡಿಗೊಳ್ಳುತ್ತಿದ್ದರು. ಸಮರ್ ಮುಖರ್ಜಿ ಹಾಗೂ ಇತರ ಸಂಗಾತಿಗಳು ಅಲ್ಲಿಂದ ಹೊರಟು ಹೋದ ಮೇಲೆ ತಹಸಿಲ್ದಾರರು, ಕಾಂಗ್ರೆಸ್ (ಐ) ಜನ ಹಾಗೂ ಪೋಲೀಸರು ಈ ರೀತಿ ದೂರು ಕೊಟ್ಟಿದ್ದಕ್ಕಾಗಿ ಪರಿಹಾರಕ್ಕಾಗಿ ಕಾದಿದ್ದ ಜನರನ್ನು ಬೆದರಿಸಿದರು. ನಂತರ ಒಂದು ಕೋಣೆಯಲ್ಲಿ ಸೇರಿಕೊಂಡು ತಮಗೆ ಬೇಕಾದವರಿಗೆ ಮನೆ ರಿಪೇರಿಗೆ ಸಾಲ ಹಂಚಿದರು. ನೆರೆದಿದ್ದ ಜನ ಕೇಳಿದಾಗ ಅವರ ಹೆಸರು ಪಟ್ಟಿಯಲ್ಲಿಲ್ಲ ಎಂದು ಹೇಳಲಾಯಿತು. ಅದುವರೆಗೆ ಶಾಂತರಾಗಿದ್ದ ಜನ ಪ್ರತಿಭಟಿಸಿದರು. ಕಾಂಗ್ರೆಸ್ (ಐ) ನವರ ಸಲಹೆಯಂತೆ ತಹಸಿಲ್ದಾರ ಪೋಲೀಸರಿಗೆ ಗುಂಡುಹಾರಿಸಲು ಆಜ್ಞೆ ಮಾಡಿದ. ಚಂಡಮಾರುತದಿಂದ ಉಳಿದುಕೊಂಡಿದ್ದ ಅರವತ್ತರ ವೃದ್ಧ ಕಾಂಗ್ರೆಸ್ (ಐ)ನ ಪೋಲೀಸ್ ಗುಂಡಿಗೆ ಬಲಿಯಾದ.

ಆಂಧ್ರ ಪ್ರದೇಶ :

ನಾಲ್ಕು ವರ್ಷಗಳಲ್ಲಿ ಮೂರು ಮುಖ್ಯಮಂತ್ರಿಗಳು

ಅಷ್ಟೇ ಅಲ್ಲ, ನೂರಾ ಐವತ್ತೊಂದು ಕಾಂಗ್ರೆಸ್ (ಐ) ಶಾಸಕರು ಮಂತ್ರಿ ಗದ್ದುಗೆಯ ಮೇಲೆ ಕೂತಿದ್ದಾರೆ. ಮುಂದಿನ ಗಳಿಗೆಯಲ್ಲಿ ಇಂದಿರಾ ಗಾಂಧಿ ಯಾರನ್ನು ಮುಖ್ಯ ಮಂತ್ರಿಯಾಗು ಅನ್ನಬಹುದು, ಮಂತ್ರಿಯಾಗು ಅನ್ನಬಹುದು ಅಥವಾ ಬಾಗಿಲು ತೋರಿಸಬಹುದು ಎಂಬುದು ಯಾರಿಗೂ ಗೊತ್ತಿಲ್ಲ. ಆದ್ದರಿಂದ ಈ ರಾಜ್ಯದಲ್ಲಿ ಕಾಂಗ್ರೆಸ್ (ಐ) ಶಾಸಕರ ಒಂದೇ ಚಿಂತೆಯೆಂದರೆ ಹೇಗೆ ಗದ್ದುಗೆ ಪಡೆಯುವುದು, ಪಡೆದ ಮೇಲೆ ಹೇಗೆ ಅದನ್ನು ಉಳಿಸಿಕೊಳ್ಳುವುದು ಎಂಬುದು ಮಾತ್ರ. ಈ ಮಧ್ಯೆ ಜನರ ಸಮಸ್ಯೆ ಹೇಗೆ ಪರಿಹಾರವಾಗಬೇಕು ? ಭ್ರಷ್ಟಾಚಾರ ಇಲ್ಲೀಗ ತೀರಾ ಸಾಮಾನ್ಯ. ಸರಕಾರೀ ಖಜಾನೆಯ ಕೊಳ್ಳೆಯಾಗುತ್ತಿದೆ. ಕಾನೂನು ವ್ಯವಸ್ಥೆಯ ಹೆಸರೇ ಇಲ್ಲ. ಕೋಮು ಅಶಾಂತಿ ದಿನೇ ದಿನೇ ಹೆಚ್ಚುತ್ತಿದೆ. ಪೋಲೀಸು ಕಾಂಗ್ರೆಸ್ (ಐ)ನ ಖಾಸಗೀ ಸೇನೆಯಂತಾಗಿಬಿಟ್ಟಿದೆ. ಅಭಿವೃದ್ಧಿ ಕಾಮಗಾರಿಗಳು ಕಟಸ್ಥಗೊಂಡಿವೆ. ರಾಜ್ಯದ ಜನತೆಯ ಸಮಸ್ಯೆಗಳ ಪರಿಹಾರವಾಗಬೇಕಾದರೆ ಕಾಂಗ್ರೆಸ್ (ಐ)ನ್ನು ಸರಕಾರದಿಂದ ಹೊರಗೆಸೆಯಬೇಕು. ಇದಕ್ಕಾಗಿ ವಿರೋಧ ಪಕ್ಷಗಳೆಲ್ಲಾ ಒಂದು ಸ್ಪಷ್ಟ ರಾಜಕೀಯ ನಿಲುವು ತಳೆದು ಜನರ ಸಮಸ್ಯೆಗಳ ಬಗ್ಗೆ ಜಂಟೀ ಕ್ರಮಾಚರಣೆಗಿಳಿಯಬೇಕೆಂದು ಸಿ. ಪಿ. ಐ (ಎಂ) ರಾಜ್ಯ ಸಮಿತಿ ಕರೆ ನೀಡಿದೆ

ತ್ರಿಪುರಾ :

ರಫ್ತಿಗುಂಟು, ಉಣ್ಣಲಿಕ್ಕಿಲ್ಲ !

ತ್ರಿಪುರಾದಲ್ಲಿ ಎಡರಂಗ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ರಾಜ್ಯಕ್ಕೆ ಆಹಾರ ಪೂರೈಕೆಯ ವಿಷಯದಲ್ಲಿ ಕೇಂದ್ರ ಸರಕಾರ ಮಲತಾಯಿ ಧೋರಣೆ ವಹಿಸಿಕೊಂಡೇ ಬಂದಿದೆ. 1977ರ ಚುನಾವಣೆಯಲ್ಲಿ ಮಣ್ಣುಮುಕ್ಕಿದ ನಂತರ ಕಾರ್ಯಕ್ರಮಾತ್ಮಕ ರಾಜಕೀಯ ಹೋರಾಟದ ಮೂಲಕ ಕೈಲಾಗದ್ದನ್ನು ತ್ರಿಪುರಾದ ಬಡ ಜನತೆಯ ಹೊಟ್ಟೆಯ ಮೇಲೆ ಕಾಲಿಡುವ ಮೂಲಕ ಸಾಧಿಸಲು ಕಾಂಗ್ರೆಸ್ (ಐ) ಬಯಸುತ್ತಿದೆ. ಇದರಲ್ಲಿ ಭಾರತ ಆಹಾರ ನಿಗಮ (FCI) ಹಾಗೂ ರೈಲ್ವೇ ಆಡಳಿತ ಶಾಮೀಲಾಗಿದೆ.

ಕಳೆದ ನಾಲ್ಕೂವರೆ ವರ್ಷಗಳಲ್ಲಿ ತ್ರಿಪುರಾಕ್ಕೆ ಬೇಕಾದದ್ದು 624 ಸಾವಿರ ಟನ್ ಅಕ್ಕಿ, 312 ಸಾವಿರ ಟನ್ ಗೋಧಿ ಆದರೆ ತ್ರಿಪುರಾಕ್ಕೆ ಅಲಾಟ್ ಮಾಡಿದ್ದು ಕೇವಲ 325 ಸಾವಿರ ಟನ್ ಅಕ್ಕಿ, 56 ಸಾವಿರ ಟನ್ ಗೋಧಿ. ಇದರಲ್ಲಿಯೂ ವಾಸ್ತವವಾಗಿ ಆಹಾರ ನಿಗಮ ಸರಬರಾಜು ಮಾಡಿದ್ದು ಕೇವಲ 223 ಸಾವಿರ ಟನ್ ಅಕ್ಕಿ, 18 ಸಾವಿರ ಟನ್ ಗೋಧಿ. ಅದು ಕೆಲವೊಮ್ಮೆ ಮನುಷ್ಯರು ತಿನ್ನಲಾಗದ ಧಾನ್ಯವನ್ನು ಆಹಾರ ನಿಗಮ ಕೊಡಬಂದಿದೆ. ಸುಮಾರು 2000 ಟೆಲಿಗ್ರಾಂಗಳು ಹಾಗೂ ರಾಜ್ಯಸರಕಾರದ ಇತರ ಪ್ರಯತ್ನಗಳಿಗೆ ಕೇಂದ್ರದ ಪ್ರತಿಕ್ರಿಯೆ ಬರೀ ಮೌನ.

ಪ್ರಧಾನ ಮಂತ್ರಿ ಹಾಗೂ ಆಕೆಯ ಸರಕಾರ ಆಗಾಗ ಹೇಳಿಕೊಳ್ಳುವಂತೆ ರಫ್ತು ಮಾಡಲು ಸಾಧ್ಯವಾಗುವಷ್ಟು ಆಹಾರ ದಾಸ್ತಾನು ಇರುವುದು ನಿಜವಾದರೆ ತ್ರಿಪುರಾದಂತಹ ಬಡರಾಜ್ಯವನ್ನೇಕೆ ಉಪವಾಸ ಕೆಡವಬೇಕು ಎಂದು ಜನ ಕೇಳುತ್ತಿದ್ದಾರೆ. ಕಾಂಗ್ರೆಸ್(ಐ)ನ ಜನವಿರೋಧೀ ಹೊಲಸು ರಾಜಕೀಯಕ್ಕೆ ಮಿತಿಯೇ ಇದ್ದಂತಿಲ್ಲ.

ಪಂಜಾಬ್ :

ಕೋಮು ಸಾಮರಸ್ಯಕ್ಕಾಗಿ ಸಿ.ಪಿ.ಐ.(ಎಂ) ಜಾಥಾ

ದೇಶದ ಸ್ವಾತಂತ್ರ್ಯಕ್ಕಾಗಿ ಸಿಖ್, ಹಿಂದೂ, ಮುಸ್ಲಿಮರು ಒಟ್ಟಾಗಿ ರಕ್ತ ಹರಿಸಿದ ಜಾಲಿಯಾನ್‌ವಾಲಾಬಾಗ್‌ನ ಭವ್ಯ ಪರಂಪರೆಯಿರುವ ಪಂಜಾಬ್‌ನಲ್ಲಿ ಇತ್ತೀಚಿನ ದಿನಗಳಲ್ಲಿ ಕೋಮು ಸಾಮರಸ್ಯ ಕಳವಳಕರ ರೀತಿಯಲ್ಲಿ ಹದಗೆಡುತ್ತಿದೆ. ಒಳಜಗಳಕ್ಕೆ ಇನ್ನೊಂದು ಹೆಸರಾದ ಕಾಂಗ್ರೆಸ್ (ಐ)ನ ಒಂದು ವಿಭಾಗ, ಆರ್.ಎಸ್.ಎಸ್., ಭಾ.ಜ.ಪ, ಒಂದೆಡೆ ದಲ್ ಖಾಲ್ಸಾ, ಬಿಂದರ್‌ವಾಲೇ ಇನ್ನೊಂದೆಡೆ ಕೋಮು ದ್ವೇಷವನ್ನು ಹರಡುತ್ತಿದ್ದಾರೆ. ಈ ಕೋಮು ದ್ವೇಷದ ವಿಷವನ್ನು ತಡೆಯುವ ಉದ್ದೇಶದಿಂದ ಸಿ.ಪಿ.ಐ (ಎಂ) ರಾಜ್ಯದಾದ್ಯಂತ 'ಕೋಮು ಸಾಮರಸ್ಯ ಪಕ್ಷ'ವನ್ನು ಜೂನ್ 25 ರಿಂದ ಜುಲೈ 6ರವರೆಗೆ ಆಚರಿಸಿತು. ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ರ್‍ಯಾಲಿಗಳು, ಮೆರವಣಿಗೆಗಳು ನಡೆದವು. ಜಿಲ್ಲಾ ನಾಯಕರುಗಳ ನೇತೃತ್ವದಲ್ಲಿ ಸುಮಾರು 20-25 ಕಾರ್ಯಕರ್ತರ 4–5 ಜಾಥಾಗಳು ಮುಂಜಾವಿನಿಂದ ರಾತ್ರಿಯ ತನಕ ಸೈಕಲ್ಲುಗಳಲ್ಲಿ ಜನರನ್ನು ಸಮೀಪಿಸಿ ಕೋಮು ಸೌಹಾರ್ದದ ಬಗ್ಗೆ, ಕೋಮುವಾದಿಗಳ ಬಗ್ಗೆ ಗಡಿ ರಾಜ್ಯ

(6ನೇ ಪುಟ ನೋಡಿ)

ದೆಹಲಿ ಪತ್ರ:

ಕರಾಳ ಕಾಯಿದೆಗಳ ವಿರುದ್ಧ ಕಾರ್ಮಿಕರ ಮತ ಪ್ರದರ್ಶನ

—ಎನ್ಕೆ

ಕಾರ್ಮಿಕರ ಹಿತೈಷಿಗಳೆಂದು ಅಟ್ಟದ ತುದಿಯಿಂದ ಬೊಬ್ಬೆ ಹೊಡೆಯುತ್ತಿರುವ ಇಂದಿರಾ ಸರಕಾರ, ತನ್ನ ಆಶ್ವಾಸನೆಗಳನ್ನೆಲ್ಲ ಗಾಳಿಗೆ ತೂರಿ ಕಾರ್ಖಾನೆಗಳ ಗುತ್ತೇದಾರಿಗಳ ಹಿತರಕ್ಷಣೆಗಾಗಿ ಕಾರ್ಮಿಕರು ಹಲವಾರು ಹೋರಾಟಗಳ ಮೂಲಕ ಪಡೆದ ಹಕ್ಕುಗಳನ್ನು ಮೊಟಕು ಗೊಳಿಸುವ ಉದ್ದೇಶದಿಂದ ಜುಲೈ 8 ರಂದು ಪ್ರಾರಂಭವಾದ ಲೋಕಸಭೆಯಲ್ಲಿ ಕಾರ್ಮಿಕ ಕಾಯಿದೆಗಳಿಗೆ ಹಲವಾರು ಬದಲಾವಣೆಗಳನ್ನು ತರಲು ಸಿದ್ಧತೆ ಮಾಡಿದೆ. ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಬೇಕೆಂದು ಕಾರ್ಮಿಕ ಸಂಘಗಳ ರಾಷ್ಟ್ರೀಯ ಹೋರಾಟ ಸಮಿತಿ ಕರೆ ಕೊಟ್ಟಿದ್ದು, ಲೋಕ ಸಭೆ ಪ್ರಾರಂಭವಾಗುವ ದಿವಸ ಜುಲೈ 8 ರಂದು ದೆಹಲಿಯಲ್ಲಿ ಕಾರ್ಮಿಕರ ವೈಲುದ್ದದ ಮೆರವಣಿಗೆ ನಡೆದು ಬೋಟ್‌ಕ್ಲಬ್ಬಿನಲ್ಲಿ ಮತ ಪ್ರದರ್ಶನ ನಡೆಯಿತು. ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಐ.ಎನ್.ಟಿ.ಯು.ಸಿ. (ದಾರ ಗುಂಪು) ಯು.ಟಿ.ಯು.ಸಿ., ಎಚ್.ಎಂ.ಎಸ್. ಮೊದಲಾದ ಕಾರ್ಮಿಕ ಸಂಘಗಳ ಕಾರ್ಮಿಕರು ಈ ಮತಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು.

ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟ್, ಟ್ರೇಡ್ ಯೂನಿಯನ್ ಆಕ್ಟ್, ಮೊದಲಾದ ಕಾರ್ಮಿಕ ಕಾಯಿದೆಗಳನ್ನು ತಿದ್ದುಪಡಿ ಮಾಡಿ, ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳನ್ನೆಲ್ಲ ಕಾರ್ಮಿಕ ಕಾಯಿದೆಯಿಂದ ದೂರ ಇಡುವ ಹಾಗೆಯೇ ಮುಷ್ಕರಗಳನ್ನು ಪ್ರತಿಬಂಧಿಸುವ ದುಷ್ಟ ವಿಚಾರಗಳಿರುವುದರಿಂದ, ಈ ತಿದ್ದುಪಡಿಗಳನ್ನು ಕೈಬಿಡಬೇಕೆಂದು ಕಾರ್ಮಿಕರು ಒತ್ತಾಯ ಮಾಡಿದರು. ಈ ಮತ ಪ್ರದರ್ಶನದಲ್ಲಿ ಮಹಿಳೆಯರ ಸಂಖ್ಯೆ ಗಣನೀಯವಾಗಿತ್ತು.

1978ರಲ್ಲೂ ಜನತಾ ಸರಕಾರ ಅಧಿಕಾರದಲ್ಲಿದ್ದಾಗ, ಇದೇ ತರದ ತಿದ್ದುಪಡಿ ತರಲು ಪ್ರಯತ್ನ ಮಾಡಿದಾಗ, ಎಲ್ಲ ಕೇಂದ್ರೀಯ ಕಾರ್ಮಿಕ ಸಂಘಗಳು ದೆಹಲಿಯಲ್ಲಿ ಬೃಹದಾಕಾರದ ಸಮಾವೇಶ, ಮತ ಪ್ರದರ್ಶನ ನಡೆಸಿ ಜನತಾ ಸರಕಾರ ತನ್ನ ಕಾರ್ಮಿಕ ವಿರೋಧಿ ನೀತಿಯನ್ನು ಕೈಬಿಡುವಂತೆ ಮಾಡಿರುವುದನ್ನು ಇಲ್ಲಿ ನೆನಸಬಹುದು

ಇಂದಿರಾ ಸರಕಾರ ಜುಲೈ 8ರ ಪ್ರತಿಭಟನೆಗೆ ಮಣಿಯದಿದ್ದರೆ, ಇನ್ನೂ ಹೆಚ್ಚಿನ ಕ್ರಾಂತಿಕಾರಿ ಹೋರಾಟಕ್ಕೆ ದುಡಿಯುವ ಜನತೆ ತಯಾರಿ ನಡೆಸುವುದು ಅತ್ಯಗತ್ಯ.

12,000 ವಿದ್ಯಾರ್ಥಿಗಳಿಗೆ ಪ್ರವೇಶವಿಲ್ಲ

ಭಾರತ ದೇಶದ ರಾಜಧಾನಿ ದೆಹಲಿ. 65 ಕೋಟಿ ಜನರ ಹಿತ ರಕ್ಷಣೆಗಾಗಿ ಕಾಯಿದೆ ಕಾನೂನು ರೂಪಿಸುವ ಕೇಂದ್ರ ಆಡಳಿತೆಯ ಕೇಂದ್ರಬಿಂದು.

ಆದರೆ ವಿದೇಶಿಯರು ಹೊಗಳುವ ದೆಹಲಿ ನಗರದಲ್ಲಿ ನಡೆದಿರುವುದೇನು ?

ಉಚ್ಚ ಮಟ್ಟದ ಶಿಕ್ಷಣ ಪಡೆಯಬೇಕೆಂದು ವಿದ್ಯಾರ್ಥಿಗಳು ದೆಹಲಿ ವಿಶ್ವವಿದ್ಯಾಲಯಕ್ಕೆ ಹೋದರೆ ಅಲ್ಲಿ ಅವರಿಗೆ ಪ್ರವೇಶವಿಲ್ಲ. ಈ ವರ್ಷ 34800 ವಿದ್ಯಾರ್ಥಿಗಳ ಪೈಕಿ, 12,000 ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದಲ್ಲಿ ಪ್ರವೇಶವಿಲ್ಲವಂತೆ. ಕೋಟ್ಯಾವಧಿ ರೂಪಾಯಿ ಖರ್ಚುಮಾಡಿ ಸರಕಾರ ಮಿತ ಸಂತಾನದ ಪ್ರಚಾರ ನಡೆಸುತ್ತಿದ್ದಂತೆಯೇ ಮಕ್ಕಳ ಸಂಖ್ಯೆಯೂ ಹೆಚ್ಚಾಗುತ್ತಿದೆ ಹಾಗಿರುವಾಗ ಮಕ್ಕಳ ಶಿಕ್ಷಣ, ಆರೋಗ್ಯದ ಜವಾಬ್ದಾರಿ ಸರಕಾರದ್ದಾಗಿದೆ. ಹಲವಾರು ಕ್ಷೇತ್ರಗಳಲ್ಲಿ ಉತ್ತಮ ಶಿಕ್ಷಣ ಪಡೆದ ತಜ್ಞರ ಅವಶ್ಯಕತೆ ದೇಶದ ಅಭಿವೃದ್ಧಿ ಕೆಲಸಕ್ಕೆ ಬೇಕಾಗಿರುವಾಗ, ಸಾವಿರಾರು ಯುವಕರಿಗೆ ಉಚ್ಚ ಶಿಕ್ಷಣದ ಅವಕಾಶ ಒದಗಿಸಿಕೊಡುವುದು ಸರಕಾರದ ಜವಾಬ್ದಾರಿ. ಕೇಂದ್ರ ಸರಕಾರ ಈ ದಿಶೆಯಲ್ಲಿ ಕ್ರಮಕೈಗೊಳ್ಳದಿರುವುದು ಖಂಡನೀಯ.

ಕಂಡಲ್ಲಿ ದಂಗೆ, ದರೋಡೆ

ಬಿಹಾರ–ಉತ್ತರ ಪ್ರದೇಶಗಳಲ್ಲಷ್ಟೇ ದಂಗೆ-ದರೋಡೆ ನಡೆದಿರಬೇಕೆಂದು ಅಂದಾಜು ಮಾಡುವುದಿದ್ದರೆ ಸರಿಯಲ್ಲ. ದೆಹಲಿ ರಾಜಧಾನಿಯಲ್ಲಿ ಪ್ರತಿ ದಿವಸ ಇಂಥ ಘಟನೆ ನಡೆಯುತ್ತಿದ್ದು ಜನಜೀವನ-ಸಂಚಾರವೆಲ್ಲ ರಾತ್ರಿ 8 ಗಂಟೆಗೆ ಮುಕ್ತಾಯವಾಗುತ್ತದೆ. ಹತ್ತು ದಿವಸದ ನನ್ನ ದೆಹಲಿ ವಾಸದಲ್ಲಿ ತುರ್ಕ್‌ಮನ್ ಗೇಟ್ ಪ್ರದೇಶದಲ್ಲಿ ಜಾತಿ ಗಲಭೆ, ಜನನಿಬಿಡವಾದ ಪಾಲಿಕಾ ಮಾರ್ಕೆಟ್ಟಿನಲ್ಲಿ ಬಾಂಬ್ ಸ್ಫೋಟದ ಬೆದರಿಕೆ, ಸ್ಕೂಟರ್-ಕಾರ್ ಕಳವು, ನಾಲ್ಕು ಪ್ರದೇಶದಲ್ಲಿ ನಗರ ಸಭೆ ಕಾರ್ಮಿಕರ ಚಳುವಳಿ, ರಸ್ತೆಬದಿಯಲ್ಲಿರುವ ಕೋಕಾ (ಕಟ್ಟಿಗೆಯ ಅಂಗಡಿಗಳು)ದವರಿಗೂ-ಪೋಲೀಸರಿಗೂ ಜಗಳ-ಹೀಗೆ ಒಂದಿಲ್ಲೊಂದು ಘಟನೆ ಜನರ ಗಮನ ಹರಿಸಿದೆ. ಇದರ ಜೊತೆಯಲ್ಲೇ ನೀರಿನ ಅಭಾವ, ವಿದ್ಯುಚ್ಛಕ್ತಿ ಕೊರತೆ ಜನಜೀವನದ ಮೇಲೆ ಕೆಟ್ಟ ಪರಿಣಾಮವನ್ನುಂಟುಮಾಡುತ್ತಿದೆ. ಇದು ನಮ್ಮ ರಾಜಧಾನಿಯ ಕತೆ.

ಬ್ಯಾಂಕ್‌ಗಳ ಹಗಲು ದರೋಡೆಯಂತೂ ಹೆಚ್ಚು ಆಕರ್ಷಣೀಯ. ಆಳುವ ಪಕ್ಷದ ಯುವಕರಿಂದಲೂ, ಪೋಲೀಸರಿಂದಲೂ, ಪ್ರೋತ್ಸಾಹ ಪಡೆದೇ ಈ ಘಟನೆಗಳು ನಡೆಯುತ್ತಿವೆಯೆಂದು ಜನರ ಪಿಸು ಮಾತು. ಇದು ಸರಿಯೇ ಇರಬಹುದು !

○

ಕಾಂ· ದಿಮಿತ್ರೋವ್‌ರಿಗೆ ಸಿ. ಪಿ. ಐ. (ಎಂ) ಕೇಂದ್ರ ಸಮಿತಿಯ ಶ್ರದ್ಧಾಂಜಲಿ

(ಕಳೆದ ಸಂಚಿಕೆಯಿಂದ)

ಕಾರ್ಮಿಕ ಸಂಘಗಳ ಐಕ್ಯತೆ ಮತ್ತು ಎಲ್ಲಾ ವಿಧವಾದ ವಿಭಾಗಿಸುವ ಕಾರ್ಯಗಳನ್ನು ಬಿಟ್ಟು ಮುಖ್ಯವಾದ ಎರಡು ಘೋಷಣೆಗಳಾದ ಫ್ಯಾಸಿಸ್ಟ್ ವಿರೋಧಿ ಜನಾದರಣೀಯರಂಗ ಮತ್ತು ಕಾರ್ಮಿಕ ವರ್ಗದ ಐಕ್ಯತೆ ಇವುಗಳನ್ನು ಒತ್ತಿ ಹೇಳಿದರು. ಸುಧಾರಣಾವಾದಿಗಳ ಕುತಂತ್ರವಾದ ಒಡಕನ್ನುಂಟು ಮಾಡುವ ನೀತಿಯನ್ನು ಖಂಡಿಸಿದರು. ಅದೇ ಸಮಯದಲ್ಲಿ ಎಚ್ಚರಿಕೆ ನೀಡುತ್ತಾ "ಜರ್ಮನಿಯ ಕಾಮ್ರೇಡ್‌ಗಳು ಕಾಂ. ಥೇಲಮ್ಯಾನ್ ಹಲವಾರು ಬಾರಿ ಹೇಳಿದರಂತೆ ಕಾರ್ಮಿಕ ಸಂಘದ ಕೆಲಸಗಳ ಬಗ್ಗೆ ಸರಿಯಾದ ತಿಳುವಳಿಕೆ ಹೊಂದಿದ್ದರೆ, ಕಾರ್ಮಿಕ ಸಂಘಗಳಲ್ಲಿ ಒಂದು ಉತ್ತಮ ಪರಿಸ್ಥಿತಿಯು ಫ್ಯಾಸಿಸ್ಟ್ ಸರ್ವಾಧಿಕಾರಿ ಸ್ಥಾಪನೆಯ ಸಮಯದಲ್ಲಿ ಉಂಟಾಗುತ್ತಿತ್ತು." ಕಮ್ಯುನಿಸ್ಟರ ಯಥಾರ್ಥತೆಯನ್ನು ಸ್ಪಷ್ಟಪಡಿಸುತ್ತಾ ಅವರು "ನಾವು ಕಾರ್ಮಿಕ ಸಂಘಗಳ ಐಕ್ಯತೆಯನ್ನು ಎಲ್ಲಾ ದೇಶಗಳಲ್ಲಿ ಮತ್ತು ಅಂತರ ರಾಷ್ಟ್ರೀಯವಾಗಿಯೂ ಪುನರ್ ಸ್ಥಾಪನೆ ಮಾಡುತ್ತೇವೆಂದು ಹೇಳಿದರು."

ನಾವು ಒಂದೇ ಅಂತರ ರಾಷ್ಟ್ರೀಯ ಕಾರ್ಮಿಕ ಸಂಘವನ್ನು ಕೈಗಾರಿಕೆಗಳಿಂದ ಸ್ಥಾಪಿಸುತ್ತೇವೆ. ವರ್ಗ ಸಂಘರ್ಷದಲ್ಲಿ ನಾವು ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಗಳ ಮೇಲೆ ನಿಲ್ಲುತ್ತೇವೆ.

ನಾವು ಬಂಡವಾಳಶಾಹಿ ಮತ್ತು ಫ್ಯಾಸಿಸಂಗಳ ವಿರುದ್ಧ ಕಾರ್ಮಿಕ ವರ್ಗದ ಐಕ್ಯವರ್ಗ ಕಾರ್ಮಿಕ ಸಂಘಗಳ ಬಲವಾದ ಸಂಘಟನೆ ಮಾಡುವವರು. ನಮ್ಮ ಒಂದೇ ಷರತ್ತು ಎಂದರೆ ಕಾರ್ಮಿಕ ಸಂಘಗಳನ್ನು ಒಗ್ಗೂಡಿಸಿ ಬಂಡವಾಳಶಾಹಿಯ ವಿರುದ್ಧ ಚಳುವಳಿ, ಫ್ಯಾಸಿಸಂ ವಿರುದ್ಧ ಚಳುವಳಿ ಮತ್ತು ಕಾರ್ಮಿಕ ಸಂಘಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ.

ಇದು ಫ್ಯಾಸಿಸ್ಟ್ ಶಕ್ತಿಗಳ ಮುಂದು ವರಿಕೆಯಿಂದ ಉಂಟಾದ ವಾಸ್ತವಿಕತೆ ಮತ್ತು ಮೂಲ ತತ್ವದ ಪರಿಸ್ಥಿತಿ.

ಈ ಉತ್ತೇಜಕಾರಿ ಕರೆಯು ಇದೇ ವಿಶ್ವದ ಕಾರ್ಮಿಕ ಸಂಘಗಳ ಚಳುವಳಿಗಳ ಯಶಸ್ವಿಗೆ ಸಹಕಾರಿಯಾಯಿತೆಂದು ಹೇಳಿದರೆ ಅತ್ಯುಕ್ತಿಯಾಗಲಾರದು.

ಲೆನಿನಿಸ್ಟ್ ಪಕ್ಷದ ಪ್ರಮುಖ ನಾಯಕತ್ವಕ್ಕೆ ಹೆಚ್ಚಿನ ಮಹತ್ವ ಕೊಟ್ಟು ದಿಮಿತ್ರೋವ್ ಕಮ್ಯುನಿಸ್ಟ್ ಪಕ್ಷಗಳು ಒಟ್ಟುಗೂಡಬೇಕೆಂದು ಕರೆ ಕೊಟ್ಟರು. ಐಕ್ಯರಂಗಗಳನ್ನು ಸ್ಥಾಪಿಸುವಾಗ ಕಮ್ಯುನಿಸ್ಟ್ ಪಕ್ಷಗಳ ಮುಂದಾಳತ್ವವು ವಿಶೇಷವಾಗಿ ಹೆಚ್ಚುತ್ತದೆಂದು ತಿಳಿಸಿದರು.

7ನೆಯ ಕಾಂಗ್ರೆಸ್ಸು ಸಾಮ್ರಾಜ್ಯಶಾಹಿಗಳ ವಿರುದ್ಧ ವಸಾಹತುಶಾಹಿಯಲ್ಲಿದ್ದ ಜನಗಳ ಸಾಮೂಹಿಕ ಚಳುವಳಿಯು ಬೆಳೆದು ಬರುತ್ತಿರುವ ಮಧ್ಯ ಕಾಲದಲ್ಲಿ ಸಂಧಿಸಿತ್ತು. ಇದರ ಮುಂಚೂಣಿಯಲ್ಲಿ ಚೀನಾದ ಕಮ್ಯುನಿಸ್ಟ್ ಪಕ್ಷ ಇದ್ದಿತು.

ಜಪಾನಿನ ಸಾಮ್ರಾಜ್ಯಶಾಹಿಗಳ ವಿರುದ್ಧ ಮತ್ತು ಚೀನಾದ ಏಜೆಂಟರುಗಳ ವಿರುದ್ಧ, ಸಾಮ್ರಾಜ್ಯಶಾಹಿ-ವಿರೋಧಿ ಐಕ್ಯರಂಗವನ್ನು ಕಟ್ಟಲು ಮುಂದಾದ ಚೀನಾದ ಕಮ್ಯುನಿಸ್ಟ್ ಪಕ್ಷದ ನೇತೃತ್ವವನ್ನು ಮತ್ತು ಧೀರತೆಯನ್ನು ದಿಮಿತ್ರೋವ್ ಪ್ರಶಂಸಿದ್ದಾರೆ.

ಅವರು ಹೀಗೆ ಹೇಳಿದರು. "ಭಾರತದಲ್ಲಿರುವ ಕಮ್ಯುನಿಸ್ಟರು ಎಲ್ಲಾ ಸಾಮ್ರಾಜ್ಯಶಾಹಿ ವಿರುದ್ಧದ ಕಾರ್ಯ ಚಟುವಟಿಕೆಗಳಲ್ಲಿ ಬೆಂಬಲ ನೀಡಬೇಕು, ಮತ್ತು ಪಾತ್ರವಹಿಸಬೇಕು. ರಾಷ್ಟ್ರೀಯ ಸುಧಾರಣಾವಾದಿಗಳ ನಾಯಕತ್ವದಲ್ಲಿರುವವರೂ ಸಹ ಸೇರಬೇಕು."

ದಿಮಿತ್ರೋವ್ ನಾಯಕತ್ವದಲ್ಲಿ 7ನೇ ಕಾಂಗ್ರೆಸ್ಸು ಸಾಮ್ರಾಜ್ಯಶಾಹಿ ಯುದ್ಧದ ಅಪಾಯಗಳನ್ನು ಗುರುತಿಸಿತು ಮತ್ತು ಫ್ಯಾಸಿಸಂನ್ನು ಉರಿಯುವ ಕಟ್ಟಿಗೆ ಎಂದು ವರ್ಣಿಸಿತು.

ಈ ದಿನ ಅಮೇರಿಕಾದ ಸಂಯುಕ್ತ ರಾಷ್ಟ್ರಗಳ ಸಾಮ್ರಾಜ್ಯಶಾಹಿಗಳು ವಿಶ್ವವನ್ನು ಅಣ್ವಸ್ತ್ರಗಳಿಂದ ಪೂರ್ಣ ನಾಶಗೊಳಿಸಲು ಮತ್ತು ಸೋವಿಯತ್ ಒಕ್ಕೂಟವನ್ನು ಹೆದರಿಸಲು ಸಿದ್ಧತೆ ನಡೆಸುತ್ತಿದ್ದಾರೆ. ಈ ಸಂಧರ್ಭದಲ್ಲಿ ದಿಮಿತ್ರೋವ್ ಮಾತುಗಳು ಜನತೆಯಲ್ಲಿ ಉತ್ತೇಜನ ಮೂಡಿಸಿ ಹೊಸ ವಿಪತ್ತನ್ನು ಎದುರಿಸಬೇಕಾಗಿದೆ. ದಿಮಿತ್ರೋವ್ ಲೆನಿನರ ಕಾರ್ಮಿಕ ವರ್ಗದ ಅಂತರ ರಾಷ್ಟ್ರೀಯತೆಯ ಪತಾಕೆಯನ್ನು ಎತ್ತಿ ಹಿಡಿದರು. ಈ ಸಂದರ್ಭದಲ್ಲಿ ಚರಿತ್ರೆಯು ಕೆಲವು ಗುರುತರವಾದ ಜವಾಬ್ದಾರಿಯನ್ನು ಅಂತರ ರಾಷ್ಟ್ರೀಯ ಕಾರ್ಮಿಕ ವರ್ಗದ ಮೇಲೆ ಹೊರಿಸಿದೆ ಅದೆಂದರೆ ಫ್ಯಾಸಿಸಂನ ಬರ್ಬರ ಆಡಳಿತದಿಂದ ಮಾನವಕುಲವನ್ನು ರಕ್ಷಿಸುವುದು. ಹೊಸ ಸಾಮ್ರಾಜ್ಯಶಾಹಿಗಳ ಈಗ ನಡೆಸಿರುವ ಭೀಭತ್ಸ ಕೃತ್ಯಗಳಿಂದ ರಕ್ಷಿಸುವುದು.

ಅವರು ಒತ್ತಿ ಹೇಳಿದ್ದಾರೆ. ಅಂತರ ರಾಷ್ಟ್ರೀಯ ಕಾರ್ಮಿಕ ವರ್ಗವು ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದ ವಿಜಯವು ಒಂದು ಮಹತ್ ಸಾಧನೆ ! ಈ ವಿಜಯವು ಅಂತರ ರಾಷ್ಟ್ರೀಯ ಶ್ರಮ ಜೀವಿಗಳ ಸೌಹಾರ್ದತೆಯ ಕುರುಹು, ತಳಹದಿ, ಮತ್ತು ಮುಂದೆ ಬರುವ ಹೋರಾಟಗಳಲ್ಲಿ ಕಾರ್ಮಿಕ ವರ್ಗಕ್ಕೆ ಉತ್ತೇಜನ ನೀಡುವ ನೆಲೆಯಾಗಿದೆ.

ದಿಮಿತ್ರೋವ್ ಫ್ಯಾಸಿಸಂ ಪೂರ್ಣವಾಗಿ ಅಳಿಸಿ ಹೋಗುವವರೆಗೆ ಮತ್ತು ಪೂರ್ವ ಐರೋಪ್ಯ ದೇಶಗಳ ಸ್ವತಂತ್ರವಾಗುವವರೆಗೆ ಬದುಕಿದ್ದರು. 7ನೇ ಕಾಂಗ್ರೆಸ್ಸಿನಲ್ಲಿ ಹಾಕಿದ ಮಾರ್ಗದರ್ಶನದಲ್ಲಿ ಕಮ್ಯುನಿಸ್ಟ್ ಚಳುವಳಿಗಳು ತನ್ನ ಎಲ್ಲಾ ಶಕ್ತಿಗಳನ್ನು ಯೂರೋಪಿನಲ್ಲಿ ಫ್ಯಾಸಿಸಂ ವಿರುದ್ಧ ಮತ್ತು ವಸಾಹತುಗಳಲ್ಲಿ ಸಾಮ್ರಾಜ್ಯಶಾಹಿಗಳ ವಿರುದ ಉಪಯೋಗಿಸಲು ಅನುಕೂಲವಾಯಿತು.

ಯೂರೋಪಿನ ಕಮ್ಯುನಿಸ್ಟ್ ಪಕ್ಷಗಳು ಫ್ಯಾಸಿಸ್ಟ್ ವಿರೋಧಿ ಶಕ್ತಿಗಳನ್ನು ತಡೆಗಟ್ಟುವುದರಲ್ಲಿ ಮುಂದೆ ನಿಂತವು. ಮತ್ತು ಪೂರ್ವ ಯೂರೋಪಿನಲ್ಲಿ ಕೆಂಪು ಸೇನೆಗೆ ಸಮಾಜವಾದವನ್ನು ಸ್ಥಾಪಿಸಲು ಸಹಾಯ ಮಾಡಿದವು.

ವಸಾಹತುಶಾಹಿ ಜಗತ್ತಿನಲ್ಲಿ ಸಾಮ್ರಾಜ್ಯಶಾಹಿಗಳ ಭದ್ರಬುನಾದಿಗಳು ಛಿದ್ರವಾಗಿ ಚೀನಾದ ಬಿಡುಗಡೆ ಮತ್ತು ಭಾರತದಲ್ಲಿ ಸ್ವಾತಂತ್ರ್ಯ ಲಭಿಸಿತು.

ಬಲ್ಗೇರಿಯಾದ ಬಿಡುಗಡೆಯಾದ ನಂತರ ಹೊಸ ಜವಾಬ್ದಾರಿಯು ದಿಮಿತ್ರೋವ್ ಮೇಲೆ ಬಿದ್ದಿತು. ತಮ್ಮ ದೇಶವನ್ನು ಸಮಾಜವಾದದ ಕಡೆಗೆ ಕೊಂಡೊಯ್ಯುವುದು. ತಮ್ಮ ಸ್ವಂತ ಪಾಠಗಳನ್ನು ಕಾರ್ಯರೂಪಕ್ಕೆ ತಂದು, ಪಕ್ಷದ ನಾಯಕತ್ವದ ಮೇಲೆ ಆಧರಿಸಿ, ಕಾಮ್ಯುನಿಸ್ಟ್ ರಂಗದ ಆಧಾರದ ಮೇಲೆ ಈ ಮಹಾನ್ ಶ್ರಮಜೀವಿ, ಸಂಧಾನಗಳಿಂದ ಸಮಸ್ಯೆಗಳನ್ನು

(7ನೇ ಪುಟ ನೋಡಿ)

ಕಾಶ್ಮೀರದ ಬೆಳವಣಿಗೆಗಳ ಕುರಿತು....

–ಹರಕಿಷನ್ ಸಿಂಗ್ ಸುರಜೀತ್

ಕಾಶ್ಮೀರದಲ್ಲಿ ಇತ್ತೀಚೆಗೆ ಧಾರ್ಮಿಕ ಕೋಮುವಾದಿ ಸಂಸ್ಥೆಗಳ ಬೆಳವಣಿಗೆಯಿಂದಾಗಿ ಅಪಾಯಕಾರಿ ರಾಜಕೀಯ ಪರಿಸ್ಥಿತಿ ಉಂಟಾಗುವ ಸೂಚನೆಗಳು ಕಂಡು ಬಂದಿವೆ. ಇಸ್ಲಾಂ ಮೂಲಭೂತವಾದಿಗಳು ಎಸ್. ಎಫ್. ಐ. ಕಾರ್ಯಕರ್ತರ ಮೇಲೆ ಮತ್ತು ನಾನು ಪಕ್ಷದ ರಾಜ್ಯ ಸಮಿತಿಯ ಸಭೆಯಲ್ಲಿ ಭಾಗವಹಿಸುತ್ತಿದ್ದಾಗ ನಡೆಸಿದ ದಾಳಿ ಇದನ್ನು ಎತ್ತಿ ತೋರಿಸುತ್ತದೆ.

ಈ ರಾಜ್ಯ ಹಿಂದೊಮ್ಮೆ ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವಗಳಿಗೆ ಅತ್ಯುತ್ತಮ ಉದಾಹರಣೆಯಾಗಿತ್ತು. ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಶೇಖ್ ಅಬ್ದುಲ್ಲಾರ ನಾಯಕತ್ವದಲ್ಲಿ ಮುಸ್ಲಿಮ್ ಸಮ್ಮೇಳನವು ರಾಷ್ಟ್ರೀಯ ಸಮ್ಮೇಳನವಾಗಿ ಮಾರ್ಪಟ್ಟ ಮೇಲೆ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನೊಂದಿಗೆ ಸೇರಿ ಪಾಳೆಯಗಾರಿ ರಾಜರುಗಳು ಮತ್ತು ಬ್ರಿಟಿಷ್ ಸಾಮ್ರಾಜ್ಯವಾದಿಗಳ ವಿರುದ್ಧ ತೀವ್ರ ಹೋರಾಟವನ್ನು ನಡೆಸಿತು.

ಜಾತ್ಯಾತೀತತೆಯ ಪರಂಪರೆ :

ಕಾಶ್ಮೀರ ರಾಷ್ಟ್ರೀಯ ಚಳುವಳಿಯು ಎಡವಾದಿ ಧೋರಣೆಗಳನ್ನು ಹೊಂದಿದ್ದು ಜಾತ್ಯಾತೀತತೆ ಪ್ರಜಾಪ್ರಭುತ್ವ ಮತ್ತು ಪ್ರಗತಿಪರ ವಿಚಾರಗಳ ಕಾರ್ಯಕ್ರಮವನ್ನು ಮುಂದುವರಿಸಿಕೊಂಡಿತ್ತು. ಜಿನ್ನಾರ ಎರಡು ರಾಷ್ಟ್ರಗಳ ಸಿದ್ಧಾಂತವನ್ನು ಅದು ನಿರಾಕರಿಸಿತ್ತು. ಜಮ್ಮು ಕಾಶ್ಮೀರ ಹಿಂದೆಂದೂ ಕೋಮುವಾದಿ ಗಲಭೆಯನ್ನು ಕಂಡಿರಲೇ ಇಲ್ಲ. ಬದಲಾಗಿ ಕೋಮು ಸೌಹಾರ್ದತೆಯ ಭದ್ರ ಕೋಟೆಯಾಗಿತ್ತು. 1947—48ರಲ್ಲಿ ಪಾಕಿಸ್ತಾನವು ಕಾಶ್ಮೀರದ ಮೇಲೆ ದಾಳಿ ಮಾಡಿದಾಗ ಹಿಂದು ಮುಸ್ಲಿಮರು ಒಂದಾಗಿ ರಕ್ಷಣೆ ನಡೆಸಿದ್ದರು. ಅಪರಿಮಿತ ತ್ಯಾಗದಿಂದ ಕೂಡಿದ ಈ ಹೋರಾಟದ ಸಮಯದಲ್ಲಿಯೇ ಕಾಶ್ಮೀರದ ಜನತೆ ಭಾರತದೊಂದಿಗೆ ವಿಲೀನವಾಗಲು ನಿರ್ಧರಿಸಿದರು. ಇದರಿಂದ ಅವರ ಆಶೋತ್ತರಗಳು ಈಡೇರುವುದೆಂದು ಅವರು ನಂಬಿದ್ದರು.

ಸಂವಿಧಾನದಲ್ಲಿ 370ನೇ ವಿಧಿಯನ್ನು ಸೇರಿಸಬೇಕೆಂಬ ಬೇಡಿಕೆಯನ್ನು ಮುಂದಿರಿಸಿದರು. ಇದಕ್ಕೆ ಒಪ್ಪಿಗೆ ಸಿಕ್ಕಿತು. ಆಗಿನ ಜನಸಂಘ ಅಂದರೆ ಈಗಿನ ಬಿ.ಜೆ.ಪಿ. ಇದನ್ನು ವಿರೋಧಿಸಿತ್ತು. ನಮ್ಮ ಪಕ್ಷ ಆಗಲೂ ಇದನ್ನು ಮೊದಲಿನಿಂದಲೂ ಸಮರ್ಥಿಸಿತ್ತು. ಈ ವಿಧಿಯ ಸಹಾಯದಿಂದಾಗಿಯೇ ಕಾಶ್ಮೀರದಲ್ಲಿ ಭೂಮಾಲೀಕರಿಗೆ ಯಾವುದೇ ಪರಿಹಾರ ನೀಡದೆ ರೈತರಿಗೆ ಭೂಮಿಯನ್ನು ಹಂಚಲು ಸಾಧ್ಯವಾಯಿತು.

ಸಾಮ್ರಾಜ್ಯವಾದಿಗಳ ಕುತಂತ್ರ :

ಆದರೆ ಕಾಶ್ಮೀರದಲ್ಲಿ ಶಾಂತಿ ನೆಲೆಸಿರುವುದು ಸಾಮ್ರಾಜ್ಯಶಾಹಿಗಳಿಗೆ ಇಷ್ಟವಿರಲಿಲ್ಲ. ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿನ ತಮ್ಮ ಸ್ಥಾನವನ್ನೇ ಬಳಸುವುದು, ಭಾರತದ ವಿರುದ್ಧ ಕುಪ್ರಚಾರಗಳನ್ನು ನಡೆಸುವುದು, ಪ್ರತ್ಯೇಕ ಕಾಶ್ಮೀರದ ಭಾವನೆ ಬಿತ್ತಿದ್ದು ಅಮೇರಿಕದ ರಾಯಭಾರಿ ಕಚೇರಿ ಮತ್ತಿತರ ಏಜನ್ಸಿಗಳು ಈ ಪ್ರದೇಶದಲ್ಲಿ ಗಲಭೆಯುಂಟುಮಾಡಲು ಪ್ರಯತ್ನಿಸಿತು.

ಭಾರತ ಸರ್ಕಾರದ ಕೆಲವು ನೀತಿಯಿಂದಾಗಿ ಮತ್ತು ಪಾಕಿಸ್ತಾನ ಪರ ಶಕ್ತಿಗಳು ಇದನ್ನು ಬೆಳೆಸಿ ಪ್ರಚಾರ ಮಾಡಿದ್ದರ ಫಲವಾಗಿ ಒಂದು ರೀತಿಯ ಅತೃಪ್ತಿ ಅಲ್ಲಿನ ಜನತೆಯ ಮಧ್ಯೆ ಉಂಟಾಗುತ್ತಾ ಬಂದಿತ್ತು. ನಮ್ಮ ಪಕ್ಷ ಆ ಸಂದರ್ಭದಲ್ಲಿ, ಪಾಕಿಸ್ತಾನಕ್ಕೆ ಕಾಶ್ಮೀರ ಪ್ರಶ್ನೆಯ ಬಗ್ಗೆ ಮಾತನಾಡಲು ಯಾವುದೇ ಅಧಿಕಾರ ಇಲ್ಲವೆಂದು ಸ್ಪಷ್ಟವಾಗಿ ತಿಳಿಸಿತ್ತು. ಕಾಶ್ಮೀರ ಜನತೆಯ ಆಶೋತ್ತರಗಳನ್ನು ಈಡೇರಿಸುವ ಬದಲು ಕಾಂಗ್ರೆಸ್ ನೀತಿಯು ಅವರೊಳಗೆ ಅತೃಪ್ತಿ ಮೂಡುವಂತೆ ಮಾಡಿತು.

1974ರ ಒಪ್ಪಂದ :

ಈ ಹಿನ್ನೆಲೆಯಲ್ಲಿ 1975ರಲ್ಲಿ ಶೇಖ್ ಅಬ್ದುಲ್ಲಾ ಮತ್ತು ಭಾರತ ಸರಕಾರದ ನಡುವೆ ಒಪ್ಪಂದ ಏರ್ಪಟ್ಟಾಗ ನಾವು ಅದನ್ನು ಸ್ವಾಗತಿಸಿದೆವು. ಈ ಒಪ್ಪಂದದ ನಂತರ ಜಮಾಯತ್–ಎ–ಇಸ್ಲಾಮಿ ತನ್ನ ಇರವಿಕೆ ತೋರಿಸಿಕೊಳ್ಳುತ್ತಾ ಬಂತು. ಇದು ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿರದ ಇಸ್ಲಾಮಿ ಮೂಲಭೂತವಾದಿ ತತ್ವಗಳನ್ನು ಹೊಂದಿರುವ ಸಂಸ್ಥೆ. ಇದು ಪ್ರತಿಗಾಮಿ ಧೋರಣೆಗಳನ್ನು ಭೋಧಿಸಲು ಆರಂಭಿಸಿತು. ದೂರದ ಕಣಿವೆ ಪ್ರದೇಶಗಳಲ್ಲಿ ಶಾಲೆಗಳನ್ನು ಆರಂಭ ಮಾಡಿ ಕೋಮುವಾದಿ ವಿಷ ಭಾವನೆಯನ್ನು ಬಿತ್ತಲಾರಂಭಿಸಿತು. ಆಗ ಶೇಖ್ ಅಬ್ದುಲ್ಲಾ ಈ ಸಂಸ್ಥೆಗಳ ಮೇಲೆ ಬಹಿಷ್ಕಾರ ಹಾಕಿದ್ದು ಸರಿಯಾಗಿಯೇ ಇತ್ತು.

ಆದರೆ ಜನತಾ ಆಳ್ವಿಕೆಯ ಕಾಲದಲ್ಲಿ ಸಾಮ್ರಾಜ್ಯಶಾಹಿಯು ಕಾಶ್ಮೀರದೊಳಗೆ ತನ್ನ ಚಟುವಟಿಕೆಯನ್ನು ತೀವ್ರಗೊಳಿಸಿತು. ಈ ಸಮಯದಲ್ಲಿಯೇ ಸಿ.ಪಿ.ಐ.(ಎಂ)ನ ರಾಜ್ಯಘಟಕ ಅಸ್ತಿತ್ವಕ್ಕೆ ಬಂದು ಅತಿ ಸ್ವಲ್ಪ ಕಾಲದಲ್ಲಿಯೇ ಕೆಲವೊಂದು ಪ್ರದೇಶದಲ್ಲಿ ಬಲವಾದ ಬೆಂಬಲವನ್ನು ಪಡೆದದ್ದು ಸಾಮ್ರಾಜ್ಯಶಾಹಿಗಳಿಗೆಕಣ್ಣುರಿಯುಂಟುಮಾಡಿತ್ತು.

1978-79ರಲ್ಲಿ ಅಮೆರಿಕನ್ ಮತ್ತು ಸೌದಿ ಅರೇಬಿಯದ ಮುಖ್ಯ ವ್ಯಕ್ತಿಗಳು ಕಾಶ್ಮೀರಕ್ಕೆ ಭೇಟಿ ನೀಡಿದರು. ಇದರ ಉದ್ದೇಶ ರಾಜಕೀಯ ಒಳ ಸಂಚಾಗಿತ್ತೆ ಹೊರತು ಕಾಶ್ಮೀರದ ಸೌಂದರ್ಯ ನೋಡಲು ಅಲ್ಲ. ಸಿ.ಐ.ಎ ನ ಏಜೆಂಟ್ ಗ್ರಿಫಿನ್ ಒಂದು ತಿಂಗಳ ಕಾಲ ಇಲ್ಲಿದ್ದ. ಜಮಾಯತ್–ಎ–ಇಸ್ಲಾಮಿಯ ಸಹವರ್ತಿಯಾದ ಜಮಾಯತ್–ಎ ತುಲ್‌ಬಾ ತನ್ನ ಚಟುವಟಿಕೆಯನ್ನು ತೀವ್ರಗೊಳಿಸಿತು. ಜನವಾದೀ ಸಂಸ್ಥೆಗಳ ಮೇಲೆ, ವಿಶ್ವವಿದ್ಯಾಲಯದ ವೈಜ್ಞಾನಿಕ ಪುಸ್ತಕಗಳ ಮೇಲೆ ಅದು ತನ್ನ ನೇರ ದಾಳಿಯನ್ನು ಆರಂಭಿಸಿತು. ಕಾಶ್ಮೀರ ವಿಶ್ವ ವಿದ್ಯಾಲಯದಲ್ಲಿ 'ಸೋವಿಯತ್ ದೇಶ'ದ ಪ್ರದರ್ಶನಕ್ಕೆ ಅದು ಅಡ್ಡಿಯುಂಟುಮಾಡಿತು.

ಚಟುವಟಿಕೆಗಳು

ಇಸ್ಲಾಂ ಪ್ರಚಾರಪರ ತಬ್ಲಿಗ್-ಉಲ್-ಇಸ್ಲಾಂ ಎಂಬ ಇನ್ನೊಂದು ಸಂಘಟನೆ ಈ ರಾಜ್ಯದಲ್ಲಿ ಸಕ್ರಿಯವಾಗಿತ್ತು. ಮೆಕ್ಕಾದ ಇಮಾಮ್‌ರ ಭೇಟಿ ಇಸ್ಲಾಂ ಮೂಲಭೂತವಾದಿಗಳಿಗೆ ಹೊಸ ಸ್ಫೂರ್ತಿ ನೀಡಿತು. ಸೌದಿ ಅರೇಬಿಯದ ಹಣದ ಬೆಂಬಲವೂ ಜಾಸ್ತಿಯಾಯಿತು. 1980ರಲ್ಲಿ ಮುಸ್ಲಿಂ ವಿದ್ಯಾರ್ಥಿಗಳ ವಿಶ್ವ ಸಮ್ಮೇಳನ ನಡೆಯಬೇಕಾಗಿದ್ದು ಈ ಪ್ರತಿಗಾಮಿಗಳ ಚಟುವಟಿಕೆಯಿಂದಾಗಿ ರದ್ದಾಯಿತು.

ಶೇಖ್ ಅಬ್ದುಲ್ಲಾರೊಂದಿಗೆ ಸೇರಿ ಅಧಿಕಾರ ಹಂಚಿಕೊಳ್ಳಬೇಕೆಂದಿದ್ದ ಕಾಂಗ್ರೆಸ್‌ನ ಆಸೆ ಕೈಗೂಡಲೇ ಇಲ್ಲ. ಇದರೊಂದಿಗೆ, ಆರ್ಥಿಕರಂಗದಲ್ಲಿ ಸರ್ಕಾರದ ವಿಫಲತೆ ಮತ್ತು ಭ್ರಷ್ಟಾಚಾರಗಳಿಂದಾಗಿ ಶೇಖ್ ಅಬ್ದುಲ್ಲಾರು ಮೊದಲಿನಂತೆ ತಮ್ಮ ಜನಪ್ರಿಯತೆ ಕಳಕೊಳ್ಳುತ್ತಾ ಬಂದರು. ಕಾಂಗ್ರೆಸ್ಸಾಗಲೀ ರಾಷ್ಟ್ರೀಯ ಸಮ್ಮೇಳನವಾಗಲೀ ಇಸ್ಲಾಂ ಪ್ರತಿಗಾಮಿಗಳ ಬಗ್ಗೆ ಯಾವುದೇ ಕಾಳಜಿ ವಹಿಸಲಿಲ್ಲ.

ಭುಟ್ಟೋರ ಕೊಲೆಯಾದಾಗ ಪ್ರಪಂಚದಾದ್ಯಂತ ಪ್ರತಿಭಟನೆ ವ್ಯಕ್ತವಾದರೆ ಜಮಾಯತ್-ಎ-ಇಸ್ಲಾಮಿ ಸಿಹಿ ಹಂಚಿದ್ದು ಜನತೆಗೆ ನೆನಪಿರಬಹುದು. ಅಫ್ಘಾನಿಸ್ತಾನ್ ಕ್ರಾಂತಿಯ ವಿಷಯ ಜನತೆಯ ಮಧ್ಯೆ ವಿಷ ಭಾವನೆಯನ್ನು ಬಿತ್ತಲು ಈ ಶಕ್ತಿಗಳು ಉಪಯೋಗಿಸಿಕೊಂಡವು. ಬೇರ್ಯಾವುದೇ ವಿರೋಧ ಪಕ್ಷಗಳು ಈ ಶಕ್ತಿಗಳ ಚಟುವಟಿಕೆಗಳನ್ನು ಎದುರಿಸಲು ತಯಾರಿಲ್ಲವಾದ್ದರಿಂದ ಕೋಮುವಾದಿ ವಾತಾವರಣ ಕಾಶ್ಮೀರದಲ್ಲಿ ಉಂಟಾಗತೊಡಗಿತು. ಕಾಶ್ಮೀರದಲ್ಲಿ ಸಿ.ಪಿ.ಐ. (ಎಂ) ಸಣ್ಣ ಶಕ್ತಿಯಾದರೂ ಕೂಡಾ ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತೆಯ ತತ್ವಗಳನ್ನು ಕಾಶ್ಮೀರದಲ್ಲಿ ಎತ್ತಿ ಹಿಡಿಯಲು ಮುಂದೆ ಬಂದಿತು. ಈ ಪ್ರತಿಗಾಮಿ ಇಸ್ಲಾಂ ಶಕ್ತಿಗಳು ಕಮ್ಯೂನಿಸ್ಟರ ಮೇಲೆ ಅಪಪ್ರಚಾರ ನಡೆಸಲಾರಂಭಿಸಿದವು. ಪಕ್ಷದ ಕಾರ್ಯಕರ್ತರ ಮೇಲೆ, ಅವರ ಮನೆಯ ಮೇಲೆ ಧಾಳಿ ನಡೆಯಿತು. ಮೇ ತಿಂಗಳಲ್ಲಿ, ಮೇ ದಿನದ ಪ್ರದರ್ಶನದ ಮೇಲೆ ಜಮಾಯತ್-ಎ-ಇಸ್ಲಾಂ ಹಲ್ಲೆ ಮಾಡಿತು. ನೆರೆದಿದ್ದ ಜನರೇ ಅವರನ್ನು ಹಿಮ್ಮೆಟ್ಟಿಸಿದರು. ಮೇ 9 ಮತ್ತು 11 ರಂದು ನಮ್ಮ ಪಕ್ಷದ ಸಮ್ಮೇಳನಕ್ಕೆ ಈ ಶಕ್ತಿಗಳು ಬೆದರಿಕೆ ನೀಡಿದ್ದವು. ಆದರೆ ನಮ್ಮ ಕಾರ್ಯಕರ್ತರು ಯಶಸ್ವಿಯಾಗಿ ಸಮ್ಮೇಳನ ನಡೆಸಿದರು.

ಈ ರಾಜ್ಯದ ಹೊಸ ಪುನರ್ವಸತಿ ಮಸೂದೆಯ ನಂತರ ಕಾಶ್ಮೀರದಲ್ಲಿ ಈಗ ಸ್ಫೋಟಕ ಸ್ಥಿತಿ ಉಂಟಾಗಿದೆ. ಈ ಮಸೂದೆಯ ಪ್ರಕಾರ ವಿಭಜನೆಯ ಕಾಲದಲ್ಲಿ ಪಾಕೀಸ್ತಾನಕ್ಕೆ ವಲಸೆ ಹೋಗಿದ್ದವರು, ಮತ್ತು ಪಾಕೀಸ್ತಾನೀ ಆಕ್ರಮಿತ ಪ್ರದೇಶದಲ್ಲಿರುವ ಜನರು ಕಾಶ್ಮೀರಕ್ಕೆ ವಾಪಸ್ಸು ಬರಲು ಅವಕಾಶವಿದೆ. ಶಾಶ್ವತವಾಗಿ ಹಿಂದಿರುಗುವವರಿಗೆ ರಾಜ್ಯದ ಪ್ರಜೆಗಳೆಂದು ಪರಿಗಣಿಸಲಾಗುವುದು. ಪುನರ್ವಸತಿಗೆ ಅವಕಾಶ ಕೊಟ್ಟ ಮೇಲೆ ಕೇಂದ್ರವು ಪೌರತ್ವವನ್ನು ನೀಡದಿದ್ದರೆ ಆಗ ಕೇಂದ್ರ ಮತ್ತು ರಾಜ್ಯದ ನಡುವೆ ಘರ್ಷಣೆಗೆ ಅವಕಾಶ ನೀಡಿದಂತಾಗುತ್ತದೆ. ಸಂವಿಧಾನದಲ್ಲಿ 370ನೇ ವಿಧಿಯ ಪ್ರಕಾರ ಈ ರಾಜ್ಯಕ್ಕೆ ಹೆಚ್ಚು ಸ್ವಾಯತ್ತತೆ ಸಿಕ್ಕಿರುವುದನ್ನು ದುರುಪಯೋಗಪಡಿಸಿಕೊಂಡು ರಾಜ್ಯದ ಮಾತ್ರವಲ್ಲ ಇಡೀ ದೇಶದ ಭದ್ರತೆಗೆ ಧಕ್ಕೆಯುಂಟುಮಾಡುವ ಕ್ರಮವನ್ನು ಕೈಗೊಳ್ಳಲಾಗಿದೆ. ಈ ಹೊಸ ಮಸೂದೆಯ ಅಗತ್ಯವೇನಿತ್ತು ಎಂಬುದನ್ನು ಪ್ರಶ್ನಿಸಬೇಕಾಗಿದೆ.

ಈ ನಡುವೆ ಹಿಂದೂ ಕೋಮುವಾದಿಗಳು ಕೂಡಾ ಸಕ್ರಿಯ ಪಾತ್ರವಹಿಸುತ್ತಿದ್ದಾರೆ. ಜಮ್ಮು ಪ್ರದೇಶದ ಹಿಂದೂ ಜನರ ನಡುವೆ ಕೋಮುಭಾವನೆಯನ್ನು ಬಿತ್ತಲು ಬಿ ಜೆ ಪಿ. ಮುಂದಾಗಿದೆ. ಒಂದೆಡೆ ಇಸ್ಲಾಂ ಕೋಮುವಾದಿಗಳು ಮತ್ತೊಂದೆಡೆ ಹಿಂದೂ ಕೋಮುವಾದಿಗಳು ಸೇರಿ ರಾಜ್ಯದಲ್ಲಿ ಅಪಾಯಕಾರೀ ಪರಿಸ್ಥಿತಿ ಉಂಟು ಮಾಡಿದ್ದಾರೆ. ಈ ರಾಜ್ಯದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಯು ಮತ್ತೆ ಚುರುಕಾಗಿರುವ ವರದಿಗಳು ಬಂದಿವೆ. ಅಮೇರಿಕವು ಪಾಕೀಸ್ತಾನಕ್ಕೆ ಭಾರೀ ಶಸ್ತ್ರಾಸ್ತ್ರ ನೀಡುತ್ತಿರುವ ಹಿನ್ನೆಲೆಯಲ್ಲಿ ಈ ಬೆಳವಣಿಗೆಗಳನ್ನು ಗಮನಿಸಿದಾಗ ಅಪಾಯಕಾರೀ ಪರಿಸ್ಥಿತಿಯ ಅರಿವುಂಟಾಗುತ್ತದೆ.

ರಾಷ್ಟ್ರದ ಐಕ್ಯತೆ ಮತ್ತು ರಕ್ಷಣೆಯ ಬಗ್ಗೆ ವಿಪರೀತವಾಗಿ ಮಾತಾಡುವ ಕಾಂಗ್ರೆಸ್ ನಾಯಕರು, ಕಾಶ್ಮೀರದಲ್ಲಿ ಸಮಸ್ಯೆ ಉದ್ಭವವಾಗಿರುವುದರ ಬಗ್ಗೆ ಚಕಾರವೆತ್ತುವುದಿಲ್ಲ. ಅಧಿಕಾರ ಲಾಲಸೆಯೊಂದೇ ಅವರ ಧ್ಯೇಯವಾಗಿದೆಯೆ ಹೊರತು ಈ ಪ್ರತಿಗಾಮಿ ಶಕ್ತಿಗಳನ್ನು ಎದುರಿಸುವುದಲ್ಲ.

ಅಬ್ದುಲ್ಲಾರ ರಾಷ್ಟ್ರೀಯ ಸಮ್ಮೇಳನವು ತನ್ನ ಹಿಂದಿನ ಘನತೆಯನ್ನು ಈಗ ತೋರಿಸಬೇಕಾಗಿದೆ. ಈಗಿರುವ ಹಾಗೆ ಸುಮ್ಮನೆ ಕುಳಿತಲ್ಲಿ ಪ್ರತಿಗಾಮಿ ಶಕ್ತಿಗಳು ಅಭಿವೃದ್ಧಿ ಹೊಂದಿ ರಾಷ್ಟ್ರೀಯ ಸಮ್ಮೇಳನವನ್ನು ಹಿಂದೆ ಹಾಕುವ ಪರಿಸ್ಥಿತಿ ಬರಬಹುದು. ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವ ರಕ್ಷಣೆಗಾಗಿ ಅಬ್ದುಲ್ಲಾರ ಪಕ್ಷ ಮುಂಬರಬೇಕು.

ಕಾಶ್ಮೀರ ಜನತೆಯ ಜನವಾದೀ ಪರಂಪರೆಯನ್ನು ಅಳಿಸಿ ಹಾಕಲು ಪ್ರಯತ್ನಿಸುತ್ತಿರುವ ಇಸ್ಲಾಮಿ ಮತ್ತು ಹಿಂದೂ ಕೋಮುವಾದಿಗಳ ವಿರುದ್ಧ ಎಲ್ಲಾ ಪ್ರಜಾಪ್ರಭುತ್ವವಾದೀ ಶಕ್ತಿಗಳು ಒಂದಾಗಬೇಕು. ದೇಶದ ಇತರ ಕಡೆಯ ಜನವಾದೀ ಶಕ್ತಿಗಳು ಕಾಶ್ಮೀರದ ಸ್ಥಿತಿಯ ಬಗ್ಗೆ ಬರಿಯ ಪ್ರೇಕ್ಷಕರಾಗಿರುವುದು ಸಾಧ್ಯವಿಲ್ಲ. ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವವನ್ನುಳಿಸಲು, ದೇಶದ ರಕ್ಷಣೆ ಮತ್ತು ಐಕ್ಯತೆ ಕಾಪಾಡಲು ಈ ಶಕ್ತಿಗಳು ಒಂದಾಗಿ ಬಲವಾದ ಧ್ವನಿಯೆತ್ತುವುದು ಅತ್ಯಂತ ಅಗತ್ಯವಾಗಿದೆ.

ಕೋಮು ಸಾಮರಸ್ಯಕ್ಕಾಗಿ ಸಿ.ಪಿ ಐ.(ಎಂ) ಜಾಥಾ

(4ನೇ ಪುಟದಿಂದ)

ದಲ್ಲಿ ಸಾಮ್ರಾಜ್ಯಶಾಹಿಗಳ ಸಂಚಿನ ಬಗ್ಗೆ ಜನರಿಗೆ ತಿಳಿಯ ಹೇಳುತ್ತಾ ರಾತ್ರಿಗಳಲ್ಲಿ ಸಾರ್ವಜನಿಕ ಸಭೆ ನಡೆಸುತ್ತಿದ್ದರು. ಪೋಸ್ಟರುಗಳು, ಗೋಡೆ ಬರಹಗಳು ಇತ್ಯಾದಿಗಳ ಮೂಲಕ ಪ್ರಚಾರ ನಡೆಸುತ್ತಿದ್ದರು. ಈ ರೀತಿ ಸುಮಾರು ಒಂದೂವರೆ ಲಕ್ಷ ಜನರನ್ನು ಪಕ್ಷದ ಕಾರ್ಯಕರ್ತರು ಮುಖತಃ ಭೇಟಿಯಾದರು. ಜಾಥಾಗಳಿಗೆ ಜನರ ಪ್ರತಿಕ್ರಿಯೆ ಅತೀ ಪ್ರೋತ್ಸಾಹದಾಯಕವಾಗಿತ್ತು. ಜಾಲಿಯಾನ್‌ವಾಲಾಬಾಗ್ ಸ್ಫೂರ್ತಿ ಇನ್ನೂ ಇದೆಯೆಂಬುದನ್ನು ಇದು ತೋರಿಸಿಕೊಟ್ಟಿತು. ಸಿಖ್ ಹಾಗೂ ಹಿಂದೂ ಕೋಮುವಾದಿಗಳ ವಿರುದ್ಧ ಜಾತ್ಯಾತೀತ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಹೋರಾಟಕ್ಕೆ ಇದು ಹೊಸ ಹುಮ್ಮಸ್ಸನ್ನು ನೀಡಿದೆ. ಸ್ಥಳೀಯ ಪತ್ರಿಕೆಗಳಲ್ಲಿ ಕಾಂಗ್ರೆಸ್ (ಐ) ಪರವಾದ ಒಂದು ಪತ್ರಿಕೆ ಹಾಗೂ ಇನ್ನೊಂದು ಕೋಮುವಾದೀ ಪತ್ರಿಕೆ ಬಿಟ್ಟು ಉಳಿದೆಲ್ಲಾ ಪತ್ರಿಕೆಗಳು ಜಾಥಾಗಳನ್ನು ಸ್ವಾಗತಿಸಿದವು. ಕಾಂಗ್ರೆಸ್ (ಐ) ಪರವಾದ ಪತ್ರಿಕೆ 'ಅಜಿತ್'ನ ಸಂಪಾದಕ ಇನ್ನೂ ಈ ಬಗ್ಗೆ ವಿಷಕಾರುತ್ತಿರುವುದೇ ಜಾಥಾ ರಾಜ್ಯದಲ್ಲಿ ಎಷ್ಟು ಪ್ರಭಾವ ಬೀರಿದೆ ಎಂಬುದಕ್ಕೆ ಸಾಕ್ಷಿ.

ಆಂಧ್ರ ಪ್ರದೇಶ :

ತೀವ್ರಗತಿಯಲ್ಲಿ ನಡೆದಿರುವ ಕೃಷಿ ಕಾರ್ಮಿಕರ ಚಳವಳಿ

ಕಳೆದ ಜೂನ್ 5 ಮತ್ತು 6 ರಂದು ಹೈದರಾಬಾದ್‌ನಲ್ಲಿ ಆಂದ್ರಪ್ರದೇಶ ಕೃಷಿ ಕಾರ್ಮಿಕರ 6ನೇ ಸಮ್ಮೇಳನವು ಸಮಾವೇಶಗೊಂಡಿತ್ತು. ಅತ್ಯಂತ ಯಶಸ್ವಿಯಾಗಿ ನಡೆದ ಈ ಸಮ್ಮೇಳನವು ರಾಜ್ಯ ಕೃಷಿಕಾರ್ಮಿಕರ ಚಳವಳಿಯಲ್ಲಿ ಮತ್ತೊಂದು ಮೈಲಿಗಲ್ಲಾಗಿದೆ.

ಪ್ರತಿ 2,50,000 ಕೃಷಿ ಕಾರ್ಮಿಕರನ್ನು ಪ್ರತಿನಿಧಿಸಿದ 465 ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಪ್ರತಿನಿಧಿ ಅಧಿವೇಶನ ಗಾಂಧೀ ಗ್ರಾಮ ಮಂದಿರ (ಹೈದರಾಬಾದ್) ದಲ್ಲಿ ನಡೆಯಿತು. ಪ್ರತಿನಿಧಿ ಅಧಿವೇಶನ ನಡೆದ ಸ್ಥಳಕ್ಕೆ ಜಿ. ಶ್ರೀನಿವಾಸರೆಡ್ಡಿ ನಗರವೆಂದು ಹೆಸರಿಡಲಾಗಿತ್ತು. (ನಲಗೊಂಡದ ಕೃಷಿ ಕಾರ್ಮಿಕರ ಧುರೀಣ ಕಾಂ| ಶ್ರೀನಿವಾಸ ರೆಡ್ಡಿ ಇತ್ತೀಚೆಗೆ ಕಾಂಗ್ರೆ ಗೂಂಡಾಗಳಿಂದ ಕೊಲೆಗೀಡಾಗಿದ್ದರು). ಅಧ್ಯಕ್ಷತೆಯನ್ನು ಕಾಂ| ಎಲ್. ಬಿ ಗಂಗಾಧರರಾವ್ ವಹಿಸಿದ್ದರು. ಅಖಿಲ ಭಾರತ ಕಿಸಾನ ಸಭಾ ಅಧ್ಯಕ್ಷ ಕಾಂ| ಬಿನೋಯ್ ಕೃಷ್ಣ ಚೌದರಿಯವರು ಸಮ್ಮೇಳನವನ್ನು ಉದ್ಘಾಟಿಸಿದರು. ಆರಂಭದಲ್ಲಿ ಸಿ ಪಿ ಐ (ಎಂ) ಪಾಲಿಟ್ ಬ್ಯೂರೋ ಸದಸ್ಯ ಕಾಂ| ಬಸವಪುನ್ನಯ್ಯನವರು ಕೆಂಬಾವುಟವನ್ನು ಅರಳಿಸಿದರು.

ಸಮ್ಮೇಳನವು ಪ್ರತಿದಿನ 8 ಕಿಲೋ ಭತ್ತ ಅಥವಾ ಅದಕ್ಕೆ ಸರಿಸಮ ಹಣವನ್ನು ದಿನಗೂಲಿಯಾಗಿ ನಿಗದಿಮಾಡುವಂತೆ ; ಮಹಿಳಾ ಮತ್ತು ಪುರುಷ ಕೂಲಿಕಾರರಿಗೆ ಸರಿಸಮ ವೇತನ ; 15 ದಿನ ವಾರ್ಷಿಕ ರಜೆ ; ಪ್ರಾಥಮಿಕ ಸೌಲಭ್ಯ ; ಕೆಲಸದ ಸ್ಥಿತಿಗತಿ ಸುಧಾರಣೆ ಇತ್ಯಾದಿ ಬೇಡಿಕೆಗಳಿಗಾಗಿ ಒತ್ತಾಯಿಸಿದೆ

ಸಗ್ಗಿ ಇಲ್ಲದಿರುವ ಸಮಯದಲ್ಲಿ ಕೃಷಿ ಕಾರ್ಮಿಕರಿಗೆ 'ಕೂಲಿಗಾಗಿ ಕಾಳು' ಯೋಜನೆಯ ಅನ್ವಯ ಕೆಲಸ ಒದಗಿಸಿ ತಲಾ ಎರಡು ಕೆ ಜಿ. ಅಕ್ಕಿ ಮತ್ತು ಒಂದು ರೂಪಾಯಿ ಒದಗಿಸುವಂತೆ ಸಮ್ಮೇಳನ ಒತ್ತಾಯಿಸಿದೆ. ಕೆಲಸ ಒದಗಿಸಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ತಲಾ ಕುಟುಂಬಕ್ಕೆ ಒಂದು ಕೆ.ಜಿ. ಅಕ್ಕಿ ಮತ್ತು ಒಂದು ರೂಪಾಯಿಯನ್ನು ಕೊಡುವ ಜವಾಬ್ದಾರಿಯನ್ನು ಸರ್ಕಾರ ಹೊರಬೇಕೆಂದು ಸಮ್ಮೇಳನ ಒತ್ತಾಯಪಡಿಸಿದೆ.

ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಸಂಯುಕ್ತ ಹೋರಾಟಗಳನ್ನು ನಡೆಸಲು ಮುಂದಾಗಬೇಕೆಂದು ಸಮ್ಮೇಳನ ಕೃಷಿ ಕಾರ್ಮಿಕರಿಗೆ ಕರೆ ನೀಡಿದೆ.

ಕಾಂ| ಸತ್ಯನಾರಾಯಣ ಅವರು ಅಧ್ಯಕ್ಷರಾಗಿರುವ, ಎಲ್. ಬಿ. ಗಂಗಾಧರರಾವ್, ಪಿ. ರಾಮಯ್ಯ ಮತ್ತು ಕಾಂ| ಕೆ. ವೆಂಕಟೇಶ್ ಅವರುಗಳು ಉಪಾಧ್ಯಕ್ಷರಾಗಿರುವ, ಪ್ರಧಾನ ಕಾರ್ಯದರ್ಶಿಯಾಗಿ ಕಾಂ| ಟಿ. ವಿ. ಆರ್. ಚಂದ್ರಮ್, ಇ. ಎಲ್. ನಾರಾಯಣ, ಪಿ. ವಿ. ಸುಬ್ಬರಾವ್, ಜಿ. ವೆಂಕಯ್ಯ ಕಾರ್ಯದರ್ಶಿಗಳಾಗಿ ಇವರುಗಳನ್ನು ಪದಾಧಿಕಾರಿಗಳನ್ನಾಗಿ ಚುನಾಯಿಸಲಾಯಿತು.

ಸಮ್ಮೇಳನದ ಕೊನೆಯದಿನ ಬೃಹತ್ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಹಸ್ರಾರು ಕೃಷಿ ಕಾರ್ಮಿಕರು ಪಾಲ್ಗೊಂಡಿದ್ದ ಈ ಮೆರವಣಿಗೆ ಮುಖ್ಯಮಂತ್ರಿಯವರಲ್ಲಿ ತೆರಳಿ ಮನವಿ ಸಲ್ಲಿಸಿತು. ನಂತರ ಬಹಿರಂಗ ಸಭೆ ನಡೆಯಿತು.

ಮೈಸೂರು :

ಕಾರ್ಪೊರೇಶನ್ ಕಾರ್ಮಿಕರ ಹೋರಾಟ ಯಶಸ್ವಿ

ನ್ಯಾಯೋಚಿತವಾದ 12 ಬೇಡಿಕೆಗಳನ್ನು ಮುಂದಿರಿಸಿ ಜೂನ್ 30 ರಿಂದ ಮೈಸೂರು ನಗರ ಕಾರ್ಪೊರೇಷನ್ ಕಛೇರಿ ಮುಂಭಾಗದಲ್ಲಿ ಧರಣಿ ಮುಷ್ಕರ ಆರಂಭಿಸಿದ ಪೌರ ಕಾರ್ಮಿಕರ ಹೋರಾಟ ಯಶಸ್ವಿಯಾಗಿದೆ. ಮೈಸೂರು ಸಿಟಿ ಕಾರ್ಪೊರೇಷನ್ ಎಂಪ್ಲಾಯಿಸ್ (ಸಿ. ಐ. ಟಿ. ಯು.) ಮತ್ತು ನಗರ ಕಾರ್ಪೊರೇಷನ್ ಕಮಿಷನರ್ ರವರ ನಡುವೆ ಬೇಡಿಕೆಗಳ ಈಡೇರಿಕೆಯ ಬಗ್ಗೆ ಒಪ್ಪಂದ ಏರ್ಪಟ್ಟು ಜುಲೈ 7ನೇ ದಿನಾಂಕ ದಂದು ಧರಣಿ ಮುಷ್ಕರ ನಿಲ್ಲಿಸಲಾಯಿತು.

5-7-82 ರಂದು ಕುಳಿತಿದ್ದ ಕಾರ್ಮಿಕರನ್ನು ಬೆಂಬಲಿಸಲು ಬಹುತೇಕ ಹೆಂಗಸರೇ ಇದ್ದ ಸಾವಿರಾರು ಪೌರ ಕಾರ್ಮಿಕರು ಮೈಸೂರು ನಗರದ ಮುಖ್ಯಬೀದಿಗಳಲ್ಲಿ ಭೃಹತ್ ಮೆರವಣಿಗೆ ನಡೆಸಿದರು. ಹೋರಾಟವನ್ನು ಮುರಿಯಲು ಸಂಚು ಹೂಡಿದ್ದ ಕಮಿಶನರ್‌ರವರು "ಸಿ.ಐ.ಟಿ ಯು." ವಿನ ಕೆಂಬಾವುಟವನ್ನು ಕಂಡು ಮತ್ತಷ್ಟು ಕೆಂಡ ಕಾರಿದ್ದರು. ಆದರೂ ಕೆಂಬಾವುಟ ಹಿಡಿದು ದಿಟ್ಟತನದಿಂದ ಹೋರಾಡಿದ ಪೌರ ಕಾರ್ಮಿಕರು ಕಮಿಶನರ್‌ರನ್ನೂ ಬೇಡಿಕೆಗಳಿಗೆ ಮಣಿಯುವಂತೆ ಮಾಡಿದರು.

ಕಾಂ|| ಎಂ.ಎಸ್. ಉಗ್ರಪ್ಪ, ಕಾಂ| ಸಿ.ಕೆ. ಮೋಸ್, ಕಾಂ| ತಿಮ್ಮೇಗೌಡ, ಕಾಂ|| ಚಿಕ್ಕಮಾರ ಮತ್ತಿತರರು ಹೋರಾಟಕ್ಕೆ ನೇತೃತ್ವ ನೀಡಿದ್ದರು.

○

ದುಸ್ಥಿತಿಯಲ್ಲಿರುವ ಪ್ರಾಥಮಿಕ ಶಾಲೆ

ರಾಯಚೂರು ನಗರದ ಸಮೀಪದಲ್ಲಿ ರಾಂಪುರ ಎಂಬ ಗ್ರಾಮವಿದೆ ಇಲ್ಲೊಂದು ಹಿರಿಯ ಪ್ರಾಥಮಿಕ ಶಾಲೆಯಿದ್ದು ಸುಮಾರು 300 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. 300 ವಿದ್ಯಾರ್ಥಿಗಳಿಗೂ ಕುರಿದೊಡ್ಡಿಯಂತಿರುವ ಒಂದೇ ಒಂದು ಕೋಣೆ, ಸರ್ಕಾರದ ವತಿಯಿಂದ ಕಟ್ಟಿದ್ದ ಶಾಲೆಯ ಕೋಣೆ ಸುಮಾರು 8-10 ವರ್ಷಗಳಿಂದ ರಿಪೇರಿ ಕಂಡಿಲ್ಲ. ಕಾರಣ ಸ್ವಲ್ಪ ದೂರದಲ್ಲಿ ಮನೆಯೊಂದನ್ನು ಬಾಡಿಗೆಗೆ ಪಡೆಯಲಾಗಿದೆ.

ಸರ್ಕಾರ ಕಟ್ಟಿಸಿರುವ ಕೋಣೆಯ ತೊಲೆ-ಕಂಬಗಳು ಗೆದ್ದಲು ತಿಂದು ಮುಟ್ಟಿದರೆ ಮುನಿಯುವ ಸ್ಥಿತಿ. ಯಾವ ಸಮಯದಲ್ಲಿ ಕುಸಿದುಬಿದ್ದು ಹಸುಳೆಗಳನ್ನು ಬಲಿತೆಗೆದುಕೊಳ್ಳುವುದೋ ಹೇಳಲಸಾಧ್ಯ. ಇನ್ನು ಬಾಡಿಗೆ ಮನೆಯಲ್ಲಿ ನಡೆಯುತ್ತಿರುವ ಶಾಲೆಯ ಬಗ್ಗೆ ಹೇಳಬೇಕೆಂದರೆ ಇದು ದನದ ದೊಡ್ಡಿಯೇ ಸರಿ. ಮಳೆ ಬಂದಾಗ ಶಾಲೆಯ ಕೋಣೆಯಲ್ಲೆಲ್ಲ ಸೀರೇ ನೀರು. ಅಲ್ಲದೇ ಒಂದೇ ಕೋಣೆಯಲ್ಲಿ ಎಲ್ಲ ವರ್ಗಗಳೂ ನಡೆಯುವುದರಿಂದ ವಿದ್ಯಾರ್ಥಿಗಳ ಗೋಳು ಹೇಳತೀರದು.

ಈ ಎಲ್ಲ ತೊಂದರೆಗಳ ಪರಿಹಾರಕ್ಕಾಗಿ ಊರಿನ ಪ್ರಮುಖರು ಸಂಬಂಧಿಸಿದ ಅಧಿಕಾರಿಗಳಿಗೆ 4-5 ವರ್ಷಗಳಿಂದ ಮನವಿ ಮಾಡಿಕೊಂಡಿದ್ದರು. ಫಲಿತಾಂಶ ಶೂನ್ಯ.

ಈ ಹಿನ್ನೆಲೆಯಲ್ಲಿ ರಾಯಚೂರು ಘಟಕದ ಎಸ್. ಎಫ್. ಐ. ಕಾರ್ಯಕರ್ತರು 11-7-82 ರಂದು ರಾಂಪುರ ಗ್ರಾಮದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಿ ಅಧಿಕಾರಿಗಳ ಬೇಜವಾಬ್ದಾರಿಯನ್ನು ಖಂಡಿಸಿದರು. ಸಭೆಯನ್ನುದ್ದೇಶಿಸಿ ಎಸ್ ಎಫ್.ಐ ರಾಜ್ಯ ಸಮಿತಿ ಖಜಾಂಚಿ ಕಾಂ| ರಾಜಶೇಖರ ಹಾಗೂ ಡಿ.ವೈ ಎಫ್.ಐ. ಕಾರ್ಯಕರ್ತರಾದ ಕಾಂ| ಕಾಯಂಣ ಅವರುಗಳು ಮಾತನಾಡಿದರು. ಶಾಲೆಯ ದುರವಸ್ಥೆಯನ್ನು ಸರಿಪಡಿಸಲು ಹೋರಾಟದ ಕಾರ್ಯಕ್ರಮವನ್ನು ಹಾಕಿಕೊಳ್ಳಲು ತೀರ್ಮಾನಿಸಲಾಯಿತು.

12-7-82 ರಂದು 400ಕ್ಕೂ ಹೆಚ್ಚು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾರಿ ಮೆರವಣಿಗೆಯ ಮೂಲಕ ನಗರಕ್ಕೆ ಬಂದು ಜಿಲ್ಲಾಧಿಕಾರಿಗಳಿಗೆ ಬೇಡಿಕೆಗಳ ಕುರಿತು ಮನವಿ ಸಲ್ಲಿಸಿದರು.

ಹಿರಿಯ ಪ್ರಾಥಮಿಕ ಶಾಲ್ಲೆಗೆ ಇನ್ನೂ 7 ಕೋಣೆಗಳ ಅವಶ್ಯಕತೆ ಇರುವುದರಿಂದ, ಇವುಗಳನ್ನು ಶೀಘ್ರದಲ್ಲಿ ಕಟ್ಟಿಸಬೇಕೆಂಬ ; ದುಃಸ್ಥಿತಿಯಲ್ಲಿರುವ ಶಾಲಾ ಕೋಣೆಗಳನ್ನು ದುರಸ್ತಿ ಮಾಡಬೇಕೆಂದು ಒತ್ತಾಯಿಸುವ ಅಂಶಗಳನ್ನು ಮನವಿ ಒಳಗೊಂಡಿತ್ತು.

ಬೇಡಿಕೆಗಳನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಗಳು ಸಹ ಶಿಕ್ಷಣಾಧಿಕಾರಿಗಳನ್ನು ಗ್ರಾಮದ ಶಾಲೆಯನ್ನು ವೀಕ್ಷಿಸಲು ಎಸ್.ಎಫ್. ಐ. ಕಾರ್ಯಕರ್ತರೊಡನೆ ಕಳಿಸಿದರು. ಸಹ ಶಿಕ್ಷಣಾಧಿಕಾರಿಯವರ ಸಲಹೆಯ ಮೇರೆಗೆ ಜಿಲ್ಲಾಧಿಕಾರಿಗಳು ಹೊಸಕಟ್ಟಡ ಪ್ರಾರಂಭಿಸಲು 15000 ರೂಗಳನ್ನು ಪ್ರಸ್ತುತ ಕಟ್ಟಡದ ರಿಪೇರಿಗಾಗಿ 1000 ರೂಗಳನ್ನು ಮಂಜೂರು ಮಾಡಿದ್ದಾರೆ. ಹೊಸ ಕಟ್ಟಡವನ್ನು ಕಟ್ಟಲು ಆಗಸ್ಟ್ ತಿಂಗಳಿನಿಂದಲೇ ಪ್ರಾರಂಭಿಸುವ ಭರವಸೆ ನೀಡಿದ್ದಾರೆ.

●

ಹೋರಾಟ ನಿರತ ಪ್ಯಾಲಿಸ್ತೇನಿಯರ ಬೆಂಬಲಾರ್ಥ ಸೌಹಾರ್ದ ದಿನಾಚರಣೆ

ಸಿ.ಪಿ.ಐ (ಎಂ) ಪಾಲಿಟ್‌ಬ್ಯೂರೋ ಕರೆಯಂತೆ ದೆಹಲಿ ಘಟಕ ಜೂನ್ 28 ರಂದು ಇಸ್ರೇಲಿ ಆಕ್ರಮಣದ ವಿರುದ್ಧ ಧೀರ ಹೋರಾಟದಲ್ಲಿ ನಿರತರಾದ ಪ್ಯಾಲಿಸ್ತೇನಿಯರ ಬೆಂಬಲಾರ್ಥವಾಗಿ ಸೌಹಾರ್ದ ದಿನಾಚರಣೆಯನ್ನು ಆಚರಿಸಿತು.

ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ| ಇ. ಎಂ. ಎಸ್. ನಂಬೂದರಿಪಾಡ್, ದೆಹಲಿ ಘಟಕದ ಕಾರ್ಯದರ್ಶಿ ಕಾಂ| ಪ್ರಕಾಶ್ ಕಾರಟ್ ಇವರುಗಳ ನೇತೃತ್ವದಲ್ಲಿ ನಿಯೋಗವೊಂದು ದೆಹಲಿಯಲ್ಲಿರುವ ಪಿ. ಎಲ್. ಓ. ವಿದೇಶಾಂಗ ಕಛೇರಿಗೆ ತೆರಳಿ ಔಷಧಿಗಳನ್ನು ಕೊಡುಗೆಯಾಗಿ ನೀಡಿತು. ಲೆಬನಾನ್‌ನಲ್ಲಿ ಆಕ್ರಮಣ ನಡೆಸಿದ ಇಸ್ರೇಲಿಗಳ ವಿರುದ್ಧ ಹೋರಾಟಮಾಡುತ್ತಿರುವ ಪಿ. ಎಲ್. ಓ. ಗೆ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿತು.

ಕೇರಳದಲ್ಲಿ

ಸಿ. ಪಿ. ಐ.(ಎಂ.) ರಾಜ್ಯ ಘಟಕದ ಕರೆಯ ಮೇರೆಗೆ ಜೂನ್ 21 ರಂದು ರಾಜ್ಯದಾದ್ಯಂತ ಭಾರತ-ಅರಬ್ ಸೌಹಾರ್ದತಾ ದಿನವನ್ನು ಆಚರಿಸಲಾಯಿತು. ಎಲ್ಲೆಡೆ ಬಹಿರಂಗಸಭೆಗಳನ್ನು ಏರ್ಪಡಿಸಲಾಗಿತ್ತು. ಲೆಬನಾನ್‌ನಲ್ಲಿ ಇಸ್ರೇಲ್ ನಡೆಸಿರುವ ಆಕ್ರಮಣದ ವಿರುದ್ಧ ಎಲ್ಲೆಡೆ ಮತ ಪ್ರದರ್ಶನ ನಡೆಸಲಾಯಿತು.

ಜೂನ್ 25ರಂದು ಡಿ. ವೈ. ಎಫ್. ಐ. ನೇತ್ರುತ್ವದಲ್ಲಿ ರಾಜ್ಯದಾದ್ಯಂತ ಪ್ಯಾಲಿಸ್ತೇನಿಯರ ಬೆಂಬಲಾರ್ಥ ಸೌಹಾರ್ದ ದಿನಾಚರಣೆ ನಡೆಸಲಾಯಿತು. ತ್ರಿವೇಂಡ್ರಮ್‌ನಲ್ಲಿ ಭಾರೀ ಮತಪ್ರದರ್ಶನ ನಡೆಸಿ ಇಸ್ರೇಲಿ ಆಕ್ರಮಣವನ್ನು, ಇಸ್ರೇಲಿಗಳನ್ನು ಬೆಂಬಲಿಸುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿಗಳನ್ನು ಖಂಡಿಸಲಾಯಿತು.

ಸಿ.ಪಿ.ಐ. (ಎಂ) ಕೇಂದ್ರ ಸಮಿತಿಯ ಶ್ರದ್ಧಾಂಜಲಿ

(5ನೇ ಪುಟದಿಂದ)

ಬಗೆಹರಿಸುವುದರಲ್ಲಿ ಯಶಸ್ವಿಯಾಗಿ, ಅಧಿಕಾರ ಬದಲಾವಣೆಯಲ್ಲಿ ಮತ್ತು ಸೋವಿಯತ್ ರಷ್ಯಾವು ಭದ್ರತಳಹದಿಯ ಮೇಲೆ ಸಮಾಜವಾದಿ ಸಮಾಜವನ್ನು ಸ್ಥಾಪಿಸುವುದರಲ್ಲಿ ಸಹಕಾರಿಯಾದರು.

ಅವರ ಕಾಲಾಧೀನದಿಂದ ವಿಶ್ವದ ಶ್ರಮಿಕ ವರ್ಗಕ್ಕೆ ಒಬ್ಬ ಮಹಾನ್ ನಾಯಕನನ್ನು ಕಳೆದುಕೊಂಡಂತೆ ಆಯಿತು.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿಯು ಈ ಶ್ರಮಿಕರ ನಾಯಕ ಮತ್ತು ಹೋರಾಟಗಾರನಿಗೆ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

○

ತಿದ್ದುಪಡಿ

● ಕಳೆದ ವಾರ (ಜುಲೈ 11) ದ ಮುಖ ಪುಟದ 'ಕೆ. ಜಿ. ಎಫ್.— ಗೋಲಿಬಾರಿಗೆ ಐವರ ಬಲಿ' ಎಂಬ ತಲೆಬರೆಹದಡಿಯ ಸುದ್ದಿಯಲ್ಲಿ ಒಂದು ಶಬ್ದ ಅಚಾತುರ್ಯದಿಂದ ತಪ್ಪಾಗಿ ಪ್ರಿಂಟಾಗಿದೆ. 3ನೇ ಕಾಲಂನ ಮೊದಲ ಪ್ಯಾರಾದಲ್ಲಿ ಅಲ್ಪಸಂಖ್ಯಾತ ಭಾಷಿಗರ ಹಿತಾಸಕ್ತಿಗಳನ್ನು ಕಡೆಗಣಿಸಲು... ಎಂದು ಅಚ್ಚಾಗಿದೆ. ದಯವಿಟ್ಟು ಇದನ್ನು...ಅಲ್ಪ ಸಂಖ್ಯಾತ ಭಾಷಿಗರ ಹಿತಾಸಕ್ತಿಗಳನ್ನು ಕಡೆಗಣಿಸದಿರಲು...ಎಂದು ತಿದ್ದುಪಡಿ ಮಾಡಿಕೊಳ್ಳಬೇಕಾಗಿ ಕೋರಿಕೆ.

● ಇದೇ ಸಂಚಿಕೆಯ 3ನೇ ಪುಟದ ಲೇಖನ(ಮಾನವಕುಲದ ವಿನಾಶಕ್ಕೆ ಅಮೇರಿಕಾ ಸಿದ್ಧತೆ)ದ ಮುಂದುವರಿಕೆ 8ನೇ ಪುಟದಲ್ಲಿ ಎಂದು ಅಚ್ಚಾಗಿದೆ. ಈ ಲೇಖನ 6ನೇ ಪುಟದಲ್ಲಿ ಮುಂದುವರೆದಿತ್ತು.

● ಜೂನ್ 27ರ ಸಂಚಿಕೆಯ 2ನೇ ಪುಟದ ಮೊದಲ ಪ್ಯಾರಾದಲ್ಲಿ (ರಾಜ್ಯದಾದ್ಯಂತ ಯಶಸ್ವೀ ಪಿಕೆಟಿಂಗ್ ಕಾರ್ಯಕ್ರಮದ ವಿವರ)...... ಪ್ರಾವಿಡೆಂಟ್‌ಫಂಡ್ ಹಣವನ್ನು ಕಾರ್ಮಿಕರಿಗೆ ವಾಪಸ್ ಮಾಡಬೇಕೆಂದೂ ...ಎಂದು ಅಚ್ಚಾಗಿದೆ. ಇದನ್ನು...ಸಂದಾಯವಾದ ಪ್ರಾವಿಡೆಂಟ್‌ಫಂಡ್ ಹಣಕ್ಕೆ ರಸೀದಿ ಕೊಡಬೇಕೆಂದೂ......ತಿದ್ದುಪಡಿಮಾಡಿಕೊಳ್ಳಬೇಕಾಗಿ ಕೋರಿಕೆ.

ಮೇಲ್ಕಾಣಿಸಿದ ತಪ್ಪುಗಳಿಗೆ ನಾವು ವಿಷಾದಿಸುತ್ತಿದ್ದು, ಈ ರೀತಿ ಪುನರಾವರ್ತನೆಯಾಗದಿರಲು ನಾವು ಪ್ರಯತ್ನಿಸುತ್ತೇವೆಂಬ ಭರವಸೆ ನೀಡುತ್ತೇವೆ.

ಸಿ.ಐ.ಟಿ.ಯು. ಕಾರ್ಯಕಾರಿ ಸಮಿತಿಯ ಸಭೆ

(1ನೇ ಪುಟದಿಂದ)

ಯೂನಿಯನ್ ಹಕ್ಕುಗಳಮೇಲೆ ಕಾಂಗ್ರೆಸ್ (ಐ) ಕೇಂದ್ರ ಸರ್ಕಾರವು ಗಧಾಪ್ರಹಾರವನ್ನು ಪ್ರಾರಂಭಿಸಿದೆ ಟ್ರೇಡ್ ಯೂನಿಯನ್ (ತಿದ್ದುಪಡಿ) ಮಸೂದೆಯನ್ನು, ಕೈಗಾರಿಕಾ ವಿವಾದಗಳ (ತಿದ್ದುಪಡಿ) ಮಸೂದೆಯನ್ನು ಲೋಕಸಭೆಯಲ್ಲಿ ಏಪ್ರಿಲ್ 30ರಂದು, ಆಸ್ಪತ್ರೆಗಳು ಮತ್ತು ಇತರ ಸಂಸ್ಥೆಗಳ (ವಿವಾದಗಳ ಇತ್ಯರ್ಥ) ಮಸೂದೆಯನ್ನು ಮೇ 6 ರಂದು ರಾಜ್ಯ ಸಭೆಯಲ್ಲಿ ಮಂಡಿಸಲಾಗಿದೆ. ಈ ಕರಾಳ ಮಸೂದೆಗಳು ಶಾಸನಗಳಾದರೆ ಟ್ರೇಡ್ ಯೂನಿಯನ್ ಹಕ್ಕುಗಳು ನಾಶವಾಗುತ್ತವೆ ಸಂಸದೀಯ ಪ್ರಜಾಪ್ರಭುತ್ವದ ಸ್ಥಾನದಲ್ಲಿ ಅಧ್ಯಕ್ಷೀಯ ಮಾದರಿಯ ಸರ್ಕಾರವನ್ನು ತಂದು ಸರ್ವಾಧಿಕಾರವನ್ನು ಹೇರುವ ಹವಣಿಕೆ ನಡೆಯುತ್ತಿದೆ.

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಸಾಮ್ರಾಜ್ಯ ಶಾಹಿಗಳ ಬೆಂಬಲ ಪಡೆದ ಇಸ್ರೇಲ್ ಲೆಬನಾನಿನ ಮೇಲೆ ನರಹತ್ಯೆ ಮಾಡಿದೆ. ಪ್ಯಾಲಿಸ್ತೇನಿಯರ ಮೇಲೆ ಆಕ್ರಮಣವನ್ನು ನಡೆಸಿದೆ. ಈ ಅಕ್ರಮಣವನ್ನು ಸಿ ಐ ಟಿ. ಯು. ತೀವ್ರವಾಗಿ ಖಂಡಿಸಿದೆ.

ಜಾಗತಿಕ ಬಂಡವಾಳಶಾಹಿ ಪದ್ಧತಿಯು ತೀವ್ರ ಬಿಕ್ಕಟ್ಟಿನಲ್ಲಿದ್ದು ಈ ಬಿಕ್ಕಟ್ಟಿನಿಂದ ಪಾರಾಗಲು ಸಾಮ್ರಾಜ್ಯಶಾಹಿಗಳು ಎಲ್ಲಾ ಕಡೆಯು ಯುದ್ಧದ ಅಪಾಯವನ್ನು ಒಡ್ಡುತ್ತಿದ್ದಾರೆ. ರೇಗನ್ ಸರ್ಕಾರವು ನ್ಯೂಟ್ರಾನ್ ಬಾಂಬುಗಳನ್ನು ದೊಡ್ಡಪ್ರಮಾಣದಲ್ಲಿ ತಯಾರಿಸುತ್ತಿದ್ದು ಅಲ್ಲಿಯ ಅರ್ಥ ವ್ಯವಸ್ಥೆಗೆ ಯುದ್ಧದ ಕಣ್ಣೋಟವನ್ನು ಕೊಟ್ಟಿದೆ. ಪಾಕಿಸ್ಥಾನಕ್ಕೆ ಎಫ್ 16 ನಂತಹ ಮಾರಕ ಶಸ್ತ್ರಾಸ್ತ್ರಗಳನ್ನು ಒದಗಿಸುವುದು, ಡಿಯಾಗೋ ಗಾರ್ಸಿಯಾದಲ್ಲಿ ಅಮೇರಿಕಾದ ಮಿಲಿಟರಿ ನೆಲೆಯನ್ನು ಬಲಗೊಳಿಸುತ್ತಿರುವದರಿಂದ ಯುದ್ಧದ ಅಪಾಯವು ನಮ್ಮ ಮನೆ ಬಾಗಿಲಿಗೇ ಬಂದಿದೆ.

ಕಳೆದ ಎರಡು ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ, ಅದರಲ್ಲಿಯೂ ಮುಖ್ಯವಾಗಿ ಬೆಂಗಳೂರಿನಲ್ಲಿ ಅನೇಕ ಸ್ಮರಣೀಯ ಹೋರಾಟಗಳು ನಡೆದಿವೆ. ನಮ್ಮ ರಾಜ್ಯದಲ್ಲಿ ಚಳುವಳಿ ನಡೆಸುವ ರೈತರ ಮೇಲೆ, ಹೋರಾಡುವ ಕಾರ್ಮಿಕರ ಮೇಲೆ ಗುಂಡೂರಾವ್ ಸರ್ಕಾರದ ಪೋಲೀಸರು ಗುಂಡಿನಮಳೆ ಕರೆದಿದ್ದಾರೆ. ಬೆಂಗಳೂರಿನಲ್ಲಿ ಸಭೆ ನಡೆಸಲೂ ಸಾಧ್ಯವಾಗದಂತೆ ಪೋಲೀಸ್ ಕಮೀಷನರ್ ಯಾವಾಗಲೂ ನಿಷೇದಾಜ್ಞೆ ಹೇರುತ್ತಾರೆ. ವಕೀಲರನ್ನು, ಕಾರ್ಮಿಕ ಮುಖಂಡರನ್ನು ಪೋಲೀಸರು ಹೊಡೆದಿದ್ದಾರೆ. ಕಾರ್ಮಿಕರನ್ನು, ಸಾರ್ವಜನಿಕರನ್ನು ಪೋಲೀಸ್ ಠಾಣೆಗಳಲ್ಲಿ ಚಿತ್ರಹಿಂಸೆ ಮಾಡಲಾಗುತ್ತಿದೆ. ಇದೇ ವೇಳೆ ಪ. ಬಂಗಾಳದ ಎಡರಂಗ ಸರ್ಕಾರವು ರೈತ ಕಾರ್ಮಿಕರ ಹೋರಾಟಗಳಲ್ಲಿ ಕಾರ್ಮಿಕರ ಮೇಲೆ, ರೈತರ ಮೇಲೆ ಪೋಲೀಸರನ್ನು ಬಿಡುವುದಿಲ್ಲ. ಆ ಸರ್ಕಾರವು ಕಾರ್ಮಿಕರ ಪರವಹಿಸಿ ಕಾರ್ಮಿಕರಿಗೆ ಅನುಕೂಲವಾಗುವಂತೆ ವಿವಾದಗಳನ್ನು ಇತ್ಯರ್ಥಪಡಿಸುತ್ತದೆ. ಈ ಹಿನ್ನೆಲೆಯಲ್ಲಿ, ಸಿ. ಐ. ಟಿ. ಯು. ಕಾರ್ಯಕಾರಿ ಸಮಿತಿಯ ಸಭೆಯು ಮೊದಲಬಾರಿಗೆ ಬೆಂಗಳೂರಿನಲ್ಲಿ ಇದೇ ಜುಲೈ 23 ರಿಂದ 25 ರವರೆಗೆ ನಡೆಯುತ್ತದೆ.

ಅಧ್ಯಕ್ಷ ಕಾಂ| ಬಿ.ಟಿ. ರಣದಿವೆ, ಪ್ರಧಾನ ಕಾರ್ಯದರ್ಶಿ ಕಾಂ| ಪಿ. ರಾಮಮೂರ್ತಿ ಎಂ. ಪಿ., ಖಜಾಂಚಿ ಹಾಗೂ ಲೋಕಸಭೆಯಲ್ಲಿ ಸಿ. ಪಿ. ಐ. (ಎಂ) ಮುಖಂಡ ಕಾಂ| ಸಮರ್ ಮುಖರ್ಜಿ, ಜ್ಯೋತಿಬಸು (ಪಶ್ಚಿಮ ಬಂಗಾಳ ಎಡರಂಗ ಸರ್ಕಾರದ ಮುಖ್ಯ ಮಂತ್ರಿ), ಕಾಂ| ಮಹಮದ್ ಇಸ್ಮಾಯಿಲ್ ಎಂ. ಪಿ, ಕಾಂ| ಸುಧೀನ್ ಕುಮಾರ್, ಕಾಂ| ಎಸ್.ವೈ. ಕೊಲ್ಲಾಟ್ಕರ್, ಕಾಂ| ಸುಶೀಲಾ ಗೋಪಾಲನ್ ಎಂ. ಪಿ, ಕಾಂ| ಸಿ. ಕಣ್ಣನ್, ಕಾಂ| ಕೆ. ರಮಣಿ, ಕಾಂ| ಮನೋರಂಜನ್‌ರಾಯ್, ಕಾರ್ಯದರ್ಶಿಗಳಾದ ಕಾಂ| ಎಂ. ಕೆ. ಪಂಧೆ, ಕಾಂ| ಇ. ಬಾಲಾನಂದನ್, ಎಂ.ಪಿ., ಕಾಂ| ನಿರೇನ್‌ಘೋಷ್, ಎಂ.ಪಿ., ಕಾಂ| ಕಮಲ್‌ಸರ್ಕಾರ್, ಕಾಂ| ನೃಸಿಂಗ್ ಚಕ್ರವರ್ತಿ, ಇವರಲ್ಲದೆ ಕಾರ್ಯಕಾರಿ ಸಮಿತಿಯ ಸದಸ್ಯರ ಪೈಕಿ ಮಂತ್ರಿಗಳೂ, ಸಂಸತ್ ಸದಸ್ಯರು, ವಿಧಾನ ಸಭೆಗಳ ಸದಸ್ಯರೂ ಇದ್ದು–ಇವರೆಲ್ಲರೂ ಬೆಂಗಳೂರಿಗೆ ಆಗಮಿಸುತ್ತಿದಾರೆ.

ಈ ಸಭೆಗೆ ಬೇಕಾದ ವ್ಯವಸ್ಥೆ ಮಾಡಲು ಸಿ.ಐ.ಟಿ.ಯು. ವಿನ ಕರ್ನಾಟಕ ರಾಜ್ಯ ಸಮಿತಿಯು ಐವತ್ತು ಸದಸ್ಯರಿರುವ ಸ್ವಾಗತ ಸಮಿತಿಯನ್ನು ರಚಿಸಿದೆ.

ಜುಲೈ 25ರ ಸಂಜೆ ಭಾರೀ ಮೆರವಣಿಗೆ ಬಹಿರಂಗ ಸಭೆಗಳು ನಡೆಯುತ್ತವೆ. ಈ ಸಭೆ ಮೆರವಣಿಗೆಯಲ್ಲಿ ಎಲ್ಲಾ ಕಾರ್ಮಿಕರೂ, ಪ್ರಜಾಪ್ರಭುತ್ವವಾದಿಗಳೂ ಭಾಗವಹಿಸಿ ಸಭೆಯನ್ನು ಯಶಸ್ವಿ ಮಾಡಬೇಕೆಂದು ಸ್ವಾಗತ ಸಮಿತಿ ಕೋರಿದೆ.

ಈ ಎಲ್ಲಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಎಲ್ಲಾ ಕಾರ್ಮಿಕ–ನೌಕರರು, ಸಾರ್ವಜನಿಕರೂ ಸಹಾಯ ಸಹಕಾರಗಳನ್ನು ನೀಡಬೇಕೆಂದು ಸ್ವಾಗತ ಸಮಿತಿಯು ಮನವಿ ಮಾಡಿಕೊಂಡಿದೆ.

ಹಸಿದ ಕಣ್ಣಳಿಂದ

ಇವರು ಬಿಟ್ಟು ಇವರಾರು....?

ಎನ್ನುವಂತೆ ದಿಲ್ಲಿ ಅಮ್ಮನವರು ಹಾಕಿದ ಯೋಜನೆ ಈಗ ಫಲ ಕೊಟ್ಟಿದೆ. ಅಂದ ಹಾಗೆ ನಮ್ಮ ಸಿಂಗ್ ಸಾಹೇಬ್ರು ಭವ್ಯ ಭಾರತದ ರಾಷ್ಟ್ರಪತಿಗಳು. "ಮುಂದೇನು?" "ನನ್ನ ತನು–ಮನ ಸೇವೆ ಭಾರತಕ್ಕಾಗಿ". ಆದರೆ ಇದನ್ನು ನಂಬುವರಾರು ? ಸ್ವತಃ ಅಮ್ಮನವರು ನಂಬಿದರೆ ಸಾಕು ಅವರ ಸೇವೆ ಸಾರ್ಥಕವಾದೀತು ಎಂಬುವುದು ಕೆಲವರ ಅಂಬೋಣ. ಆದರೆ ಇನ್ನೊಂದು ಸುದ್ದಿ ಸಿಂಗ್ ಸಾಹೇಬ್ರು ಅಧಿಕಾರಕ್ಕೆ ಬಂದ ತಕ್ಷಣ ಉಪ-ರಾಷ್ಟ್ರಪತಿ ಹಿದಾಯತುಲ್ಲಾ ಅವರು ತಮ್ಮ ಸೀಟು ಖಾಲಿ ಮಾಡುವ ಹಂಚಿಕೆಯಲ್ಲಿದ್ದಾರಂತೆ!!

●

ಬೀದಿಗಿಳಿದವರು

ಹೊಟ್ಟೆ ಪಾಡಿಗೆ ಹುಟ್ಟೂರುಬಿಟ್ಟ ಹುಡುಗರು ಹಳ್ಳಿಯ ಬದುಕುಭಾರವಾದಾಗ ಪಟ್ಟಣಗಳ ಮೊರೆ ಹೋಗುತ್ತಾರೆ. ಆದರೆ ಅಲ್ಲೋ ಯಾಂತ್ರಿಕ ಬದುಕಿನ ಹೋರಾಟ.

ಇಂಥಾ ಯಾಂತ್ರಿಕ ಬದುಕಿನ ಹೋರಾಟದ ಹುಡುಗರು ಅಂದರೆ ಹೋಟೆಲ್ ಕಾರ್ಮಿಕರು. ಇಲ್ಲಿ ಭದ್ರತೆಯಿಲ್ಲದ ಬದುಕಿಗೆ ಅಂಟಿಕೊಂಡು ದಿನಾ ದೂಡುತ್ತಾರೆ ರಾತ್ರಿ–ಹಗಲುಗಳ ಲೆಕ್ಕವಿಲ್ಲದೆ. ಆದರೆ ಇವರ ಶ್ರಮಕ್ಕೆ ಸಿಗುವುದೇನು ? ಬರೀ ಹೋಟೆಲ್ ಮಾಲೀಕರ ಕಿರುಕುಳ, ಹಿಂಸೆ.

ಇಂಥಾ ಹಲವಾರು ಪ್ರಕರಣಗಳು ಬೆಂಗಳೂರಿನ ಅನೇಕ ಹೋಟೆಲ್ ಕಾರ್ಮಿಕರದು. ಈಗ ಇಂಥಾ ಕೆಲವು ಕಾರ್ಮಿಕರು ಸಂಘಟನೆಯ ಬೆಂಬಲದೊಂದಿಗೆ ಬೀದಿಗಿಳಿದಿದ್ದಾರೆ. ಈಗಾದರೂ ಹೋಟೆಲ್ ಮಾಲೀಕರು ಕಣ್ಣು ತೆರೆದು ನೋಡಿದರೆ ಒಳ್ಳೆಯದು.

—ಕಲಾಲ್

ಪರಿಸರ

● ನನ್ನ ನಾಯಕಿ ಹೇಳಿದರೆ ನಾನು ಕಸಬರಿಕೆ ತೆಗೆದುಕೊಂಡು ಗುಡಿಸಬಲ್ಲೆ. ಆದರೆ ನನ್ನನ್ನು ರಾಷ್ಟ್ರಪತಿಯ ಸ್ಥಾನಕ್ಕೆ ಅಭ್ಯರ್ಥಿಯಾಗಿ ಆರಿಸಲಾಗಿದೆ

—ಜೇಲ್‌ಸಿಂಗ್ ತಮ್ಮ ಚುನಾವಣಾ ಸಭೆಯೊಂದರಲ್ಲಿ.

● ಹರಿಜನ, ಗಿರಿಜನ, ಮಹಿಳೆಯರ ಮೇಲೆ ರಾಷ್ಟ್ರದಲ್ಲಿ ಅತ್ಯಾಚಾರ ಹೆಚ್ಚುತ್ತಿರುವುದರ ಬಗ್ಗೆ ಕೇಂದ್ರ ಗೃಹ ಖಾತೆ ಆತಂಕಗೊಂಡಿದೆ. ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಾಸ್ಥಾನ ಮತ್ತು ಬಿಹಾರ ರಾಜ್ಯಗಳು ಈ ದೌರ್ಜನ್ಯಕ್ಕೆ ಎತ್ತಿದ ಕೈ......

ಮೇ 1981 ರಿಂದ ಏಪ್ರಿಲ್ 82 ವರೆಗೆ ಉತ್ತರ ಪ್ರದೇಶದಲ್ಲಿ, 149 ಮಹಿಳೆಯರು ಅತ್ಯಾಚಾರಕ್ಕೆ ತುತ್ತಾಗಿದ್ದಾರೆ.

—ಪ್ರಜಾವಾಣಿ ಜುಲೈ 8

● ಪ್ರಧಾನ ಮಂತ್ರಿಯವರಿಂದ ಆರಂಭಿಸಲ್ಪಟ್ಟ ಹೊಸ 20 ಅಂಶದ ಕಾರ್ಯಕ್ರಮದ ಅನ್ವಯ ಇನ್ನೂ ಎಷ್ಟೋ ರಾಜ್ಯಗಳಲ್ಲಿ ಆರಂಭವೇ ಆಗಿಲ್ಲ ಎಂದು ಯೋಜನಾ ಆಯೋಗದ ನಿರೀಕ್ಷಣಾ ಕೋಶ ಮೇಯಲ್ಲಿ ಬಿಡುಗಡೆ ಮಾಡಿದ ವರದಿಯಿಂದ ಗೊತ್ತಾಗಿದೆ.

—ಇಂಡಿಯನ್ ಎಕ್ಸ್‌ಪ್ರೆಸ್ ಜುಲೈ 7

● ಗೆಲಿಲಿ ಪ್ರದೇಶದ ಊರುಗಳಿಗೆ ಅಪಾಯವಿದ್ದಿತೆಂಬ ಕಾರಣದಿಂದ ಈ ಯುದ್ಧ ಆರಂಭವಾದುದಲ್ಲ. ಅಂಥ ಅಪಾಯ ಒದಗಲಿಲ್ಲವೇಕೆ ಎಂಬ ಕಾರಣದಿಂದ ಆರಂಭವಾದದ್ದು. ಕಳೆದ ಒಂದು ವರ್ಷದಿಂದ PLO ಕದನ ವಿರಾಮವನ್ನು ಉಳಿಸಿಕೊಂಡೆ ಬಂದಿತ್ತು.

—ಪ್ರೊ|| ಯಹೋಸುವಾ ಪರತ್

(ಟೆಲ್ ಅವಿವ್‌ನಲ್ಲಿ ನಡೆದ ಬೃಹತ್ ಯುದ್ಧ ವಿರೋಧಿ ರ‍್ಯಾಲಿಯಲ್ಲಿ)

● ಕ್ಷೀರ ಅಭಿವೃದ್ಧಿ ಯೋಜನೆಗೆ ವಿಶ್ವ ಬ್ಯಾಂಕಿನಿಂದ ಶೇ. 50 ಪೈಸೆ ಬಡ್ಡಿದರದಲ್ಲಿ 60 ಕೋಟಿ ರೂ ಸಾಲ ತಂದು ಅದನ್ನು ಶೇ. 12 ರೂ ಬಡಿಯಲ್ಲಿ ರೈತರಿಗೆ ಹಂಚುವ ಸರಕಾರದ ಕ್ರಮ ದೊಡ್ಡ ದರೋಡೆ......

—ಕಾಂಗ್ರೆ ಶಾಸಕ ಹನುಮೇಗೌಡ

(ಜುಲೈ 7ರಂದು ವಿಧಾನ ಸಭೆಯಲ್ಲಿ ಪಶು ಸಂಗೋಪನ ಇಲಾಖೆಯ ಕುರಿತು ನಡೆದ ಚರ್ಚೆಯಲ್ಲಿ)

ಸಂಪಾದಕೀಯ

(1ನೇ ಪುಟದಿಂದ)

ಸರಕಾರ ಮತ್ತು ಖಾಸಗಿ ಕಾಲೇಜುಗಳ ಮಾಲೀಕರುಗಳು ಶಾಮೀಲಾಗಿರುವರೆಂಬುದನ್ನು ಮುಚ್ಚಿಡಲು ನಡೆಸುವ ಪ್ರಯತ್ನ ಇದಾಗಿದೆ !

ಶೈಕ್ಷಣಿಕ ಕ್ಷೇತ್ರದಲ್ಲಿ ನಡೆಯುತ್ತಿರುವ ಈ ಸುಲಿಗೆಯು ನಿಲ್ಲಲೇಬೇಕು. ಇದು ನಿಲ್ಲಬೇಕಾದರೆ ಎಲ್ಲ ವಿದ್ಯಾರ್ಥಿ ಸಮುದಾಯವು ಒಂದಾಗಿ ಪ್ರಭಲವಾದ ಪ್ರಜಾಸತ್ತಾತ್ಮಕ ಚಳುವಳಿಯನ್ನು ನಡೆಸುವುದರ ಮೂಲಕ ಸರಕಾರದ ಮೇಲೆ ಒತ್ತಾಯ ಹೇರಬೇಕು. ವಿದ್ಯಾರ್ಥಿ ಸಮುದಾಯವು ಸಾರ್ವಜನಿಕರ ಮಧ್ಯೆಯೂ ಕ್ಯಾಪಿಟೇಷನ್ ಶುಲ್ಕದ ವಿರುದ್ಧ ಅಭಿಪ್ರಾಯ ಮೂಡಿಸಬೇಕು. ಕ್ಯಾಪಿಟೇಷನ್ ಶುಲ್ಕ ಮತ್ತು ಸುಲಿಗೆಗೆ ನೆಲೆಯಾಗಿರುವ ಕರ್ನಾಟಕದಲ್ಲಿ ರಾಜ್ಯದ ವಿದ್ಯಾರ್ಥಿಗಳು ಒಂದಾಗಿ ಈ ಅನಿಷ್ಟದ ವಿರುದ್ಧ ಹೋರಾಡುವಂತೆ ಮಾಡಿ, ಉಳಿದ ರಾಜ್ಯಗಳ ವಿದ್ಯಾರ್ಥಿಗಳಿಗೆ ನೇತೃತ್ವ ಕೊಡುವಂತೆ ಮಾಡಲು ಎಲ್ಲಾ ಪ್ರಗತಿಪರ ಮತ್ತು ಪ್ರಜಾ ಪ್ರಜಾಪ್ರಭುತ್ವ ವಿದ್ಯಾರ್ಥಿ ಸಂಘಟನೆ ಮುಂದಾಗುವುದು ಅತ್ಯಂತ ಅಗತ್ಯವಾಗಿದೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K V Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.